# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 09, 2024

ಸಂಪುಟ : 51 ಸಂಚಿಕೆ : 117 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ಬಿಐಇಟಿ ರಸ್ತೆಯಲ್ಲಿನ ದೇವನಗರಿ ಕಾ ರಾಜಾ



ಹಿಂದೂ ಯುವ ಸೇನೆ, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ



ವಿಘ್ನಾರ್ಥ ಫ್ರೆಂಡ್ಸ್ ಗ್ರೂಪ್, ಹೊಂಡದ ರಸ್ತೆ



ಸೇಂಟ್ ಜಾನ್ ಆಟೋ ವ್ಯಾನ್ ಚಾಲಕರ ಸಂಘ



ಏಕದಂತ ಯುವ ಸೇನೆ, ಆಂಜನೇಯ ಬಡಾವಣೆ



ಮಂಜುನಾಥ ಗೆಳೆಯರ ಬಳಗ, ಜಿ.ಬೇವಿನಹಳ್ಳಿ

# ಲಂಬೋದರನಿಗೆ ಅದ್ಧೂರಿ ಸ್ವಾಗತ

## ಮನೆಗಳಲ್ಲಿ, ಗಲ್ಲಿಗಳಲ್ಲಿ ಹಲವು ಬಗೆಯ ಮೂರ್ತಿಗಳ ಪ್ರತಿಷ್ಠಾಪನೆ, ಸಂಭ್ರಮ

ದಾವಣಗೆರೆ, ಸೆ.8- ನಗರದಲ್ಲಿ ಗಣೇಶ ಚತುರ್ಥಿಯನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ವಿವಿಧೆಡೆಯ ಸಾರ್ವಜನಿಕ ಗಣೇಶೋತ್ಸವ ಸಮಿತಿ ವತಿಯಿಂದ ನವನವೀನ ಭಂಗಿಯಲ್ಲಿನ ಬೃಹತ್ ಮೂರ್ತಿಗಳನ್ನು ಗಲ್ಲಿಗಳಲ್ಲಿ ಪ್ರತಿಷ್ಠಾಪಿಸಿದರೆ, ಮನೆಗಳಲ್ಲಿ ಚಿಕ್ಕ ಮೂರ್ತಿಗಳನ್ನು ತಂದು ಶ್ರದ್ಧಾ, ಭಕ್ತಿಯಿಂದ ಪೂಜಿಸಲಾಗಿದೆ.

ಡಿಜೆ ನೃತ್ಯ, ಸಂಗೀತ ಹಾಗೂ ಪಟಾಕಿ ಸಿಡಿಸಿ ಗಣೇಶನನ್ನು ಬರಮಾಡಿಕೊಂಡು, ವಿವಿಧ ಹೂವು, ವಿದ್ಯುತ್ ಬೆಳಕಿನಿಂದ ಅಲಂಕರಿಸಿದ ಮಂಟಪದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಲಂಬೋದರನಿಗೆ ಪ್ರಿಯವಾದ ಕಡುಬು, ಪಂಚಕಜ್ಜಾಯ, ಮೋದಕ ಸೇರಿದಂತೆ ವಿವಿಧ ಬಗೆಯ ನೈವೇದ್ಯ ಸಮರ್ಪಿಸಿದರು.

ಹಿರಿಯರು ಕಿರಿಯರೆನ್ನದೇ ಎಲ್ಲ ವಯೋಮಾನದವರು ಹೊಸ ಬಟ್ಟೆ ತೊಟ್ಟು, ದೇವರಿಗೆ ಆರತಿ ಬೆಳಗಿ ಸಂಭ್ರಮಿಸಿ, ಗಣೇಶೋತ್ಸವದಲ್ಲಿ ಭಾಗಿಯಾಗಿದ್ದರು.

ಸಾಮಾನ್ಯವಾಗಿ ವಿವಿಧೆಡೆ ಒಂದು ದಿನ, ಮೂರು ದಿನ, ಐದು, ಏಳು, ಒಂಬತ್ತು ಹಾಗೂ ಹನ್ನೊಂದು ದಿನಗಳವರೆಗೆ ಗಣೇಶನನ್ನು ಪೂಜಿಸಲಾಗುತ್ತದೆ. ಕೆಲವು ಕಡೆ ಅನಂತ ಚತುರ್ದಶಿ ತನಕ ಪೂಜಿಸುವ ವಾಡಿಕೆ ಇದೆ.

> **ಕೆಲವು ಗಣೇಶನ ಮೂರ್ತಿಗಳಿಗೆ ಒಂದು ದಿನದಲ್ಲೇ ವಿಸರ್ಜನೆ**
>
> **ತೆರೆದ ವಾಹನದಲ್ಲಿ ಸಿಂಗರಿಸಿದ ಗಣೇಶ ಮೂರ್ತಿಗಳ ಮೆರವಣಿಗೆ**
>
> **ಡಿಜೆ ಸದ್ದಿನ ಆರ್ಭಟ, ಕುಣಿದು ಕುಪ್ಪಳಿಸಿದ ಯುವಕರು**

ಶನಿವಾರ ಪ್ರಥಮ ದಿನ ಬೆಳಿಗ್ಗೆಯೇ ಏಕದಂತನನ್ನು ಪ್ರತಿಷ್ಠಾಪಿಸಿದವರು ರಾತ್ರಿ ವಿಸರ್ಜಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗಳನ್ನು ಮೆರವಣಿಗೆ ಮೂಲಕ ಕರೆದೊಯ್ಯಲಾಯಿತು. ತೆರೆದ ವಾಹನದಲ್ಲಿ ಸಿಂಗರಿಸಿದ ಗಣೇಶ ಮೂರ್ತಿಗಳ ಮೆರವಣಿಗೆಯಲ್ಲಿ ಡಿಜೆ ಸದ್ದಿನ ಆರ್ಭಟವಿತ್ತು. ಯುವಕರು ಕುಣಿದು ಕುಪ್ಪಳಿಸುತ್ತಲೇ ಪಾಲ್ಗೊಂಡಿದ್ದರು.

ನಗರದ ಗಣೇಶ ದೇವಸ್ಥಾನಗಳಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಗಣೇಶ ಚತುರ್ಥಿ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಯಿತು. ಭಕ್ತರು ಗಣೇಶ ದೇವಸ್ಥಾನಗಳಿಗೆ ತೆರಳಿ ಸರತಿಯಲ್ಲಿ ಗಣೇಶ ದರ್ಶನ ಪಡೆದರು.

ದೊಡ್ಡಪೇಟೆಯ ದೇವಸ್ಥಾನದಲ್ಲಿ 200 ಕೆ.ಜಿ.ಗೂ ಹೆಚ್ಚಿನ ಒಣ ಕೊಬ್ಬರಿ ಗಿಟುಕುಗಳಿಂದ ವಿಶೇಷವಾಗಿ ಅಲಂಕಾರ ಮಾಡಲಾಗಿದೆ. ಸಾರ್ವಜನಿಕ ವೀಕ್ಷಣೆಗೆ ಸೆ.11ರ ಬುಧವಾರ ಕೊನೆಯ ದಿನವಾಗಿದೆ.

ನಗರದ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್ ವತಿಯಿಂದ ಕಾಶಿವಿಶ್ವನಾಥ (4ನೇ ಪುಟಕ್ಕೆ)

# ಸಿಎಂ ಸ್ಥಾನಕ್ಕೆ ಹಿರಿತನದ ಮಾನದಂಡ ಸಚಿವ ಪಾಟೀಲ್‌ದ್ವಯರ ಜಟಾಪಟಿ

ಬೆಂಗಳೂರು, ಸೆ. 8 - ಮುಖ್ಯಮಂತ್ರಿ ಸ್ಥಾನಕ್ಕೆ ಹಿರಿತನದ ಮಾನದಂಡದ ಬಗ್ಗೆ ಸಚಿವರಾದ ಎಂ.ಬಿ. ಪಾಟೀಲ್ ಹಾಗೂ ಶಿವಾನಂದ ಪಾಟೀಲ್ ಅವರು ಜಟಾಪಟಿ ನಡೆಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾ ವಿವಾದದ ತೊಡಕಿನಲ್ಲಿ ರುವಾಗಲೇ ಈ ಜಟಾಪಟಿ ನಡೆದಿದೆ.

ಆದರೆ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಹಿರಿಯ ನಾಯಕರು ಹಾಗೂ ಸಚಿವರು ಹೇಳಿದ್ದಾರೆ. ನನಗೆ ಮುಖ್ಯಮಂತ್ರಿಯಾಗುವ ಯಾವುದೇ (4ನೇ ಪುಟಕ್ಕೆ)

> **ಸಿದ್ದರಾಮಯ್ಯ ಮುಡಾ ವಿವಾದದ ತೊಡಕಿನಲ್ಲಿ ಇರುವಾಗಲೇ ಗಾದಿಗಾಗಿ ಜಟಾಪಟಿ**


BSC®

"ನೂಲು ಅಷ್ಟಮಿ" ಹಬ್ಬದ ಪ್ರಯುಕ್ತ

ದಿನಾಂಕ : 10-09-2024 ನೇ ಮಂಗಳವಾರ

ನಮ್ಮ ಎಲ್ಲಾ ಅಂಗಡಿಗಳಿಗೆ ರಜಾ ಇರುತ್ತದೆ.

ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

ಬಿ.ಎಸ್.ಚನ್ನಬಸಪ್ಪ & ಸನ್ಸ್

ದಾವಣಗೆರೆ


# ಶಂಕಿತ ಎಂಪಾಕ್ಸ್ ಪ್ರಕರಣ ಪತ್ತೆ

ನವದೆಹಲಿ, ಸೆ. 8 - ಇತ್ತೀಚೆಗೆ ವಿದೇಶ ಪ್ರಯಾಣ ಮಾಡಿದ್ದ ವ್ಯಕ್ತಿಯೊಬ್ಬರಲ್ಲಿ ಶಂಕಿತ ಎಂಪಾಕ್ಸ್ ಸೋಂಕು ಕಂಡುಬಂದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ವ್ಯಕ್ತಿಯನ್ನು ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಲಾಗಿದೆ ಹಾಗೂ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಈ ಬಗ್ಗೆ ಯಾವುದೇ ಕಳವಳದ ಅಗತ್ಯವಿಲ್ಲ ಎಂದು ಸಚಿವಾಲಯ ಹೇಳಿದೆ.

ಅಸ್ವಸ್ಥ ವ್ಯಕ್ತಿಯಿಂದ ಮಾದರಿಗಳನ್ನು ಪಡೆದು ಎಂಪಾಕ್ಸ್ ತಪಾಸಣೆಗೆ ಕಳಿಸಲಾಗಿದೆ. ಎಂಪಾಕ್ಸ್ ಸೋಂಕು ಆರೋಗ್ಯ ತುರ್ತು ಪರಿಸ್ಥಿತಿ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿತ್ತು.

# ವಕ್ಫ್ ಸಂಸದೀಯ ಸಮಿತಿ ಆಸ್ತಿ ಜಟಾಪಟಿ

ನವದೆಹಲಿ, ಸೆ. 8 - ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಸಂಸತ್ತಿನ ಜಂಟಿ ಸಂಸದೀಯ ಮಂಡಳಿಯ ಸಭೆಗಳು ವಕ್ಫ್ ಆಸ್ತಿಗಳ ಕುರಿತು ಜಟಾಪಟಿಯ ತಾಣವಾಗಿ ಪರಿವರ್ತನೆಯಾಗಿದೆ. ಆಸ್ತಿಗಳು ತಮ್ಮದೆಂದು ಪರ ವಿರೋಧದ ಅರ್ಜಿಗಳು ದಾಖಲಾಗಿವೆ.

ವಕ್ಫ್ ಆಸ್ತಿಗಳನ್ನು ಸರ್ಕಾರಿ ಸಂಸ್ಥೆಗಳು ಅಕ್ರಮವಾಗಿ ವಶದಲ್ಲಿಟ್ಟುಕೊಂಡಿವೆ ಎಂದು ಪ್ರತಿಪಕ್ಷಗಳ ಸದಸ್ಯರು ಸಮಿತಿ ಎದುರು ಆರೋಪಿಸಿದ್ದಾರೆ. ದೆಹಲಿ ಒಂದರಲ್ಲೇ ವಕ್ಫ್‌ನ 172 ಆಸ್ತಿಗಳನ್ನು ಎ.ಎಸ್.ಐ. ಅಕ್ರಮವಾಗಿ ವಶದಲ್ಲಿಟ್ಟುಕೊಂಡಿದೆ ಎಂದು ಎ.ಐ.ಎಂ. ಐ.ಎಂ.ನ ಅಸಾದುದ್ದೀನ್ ಒವೈಸಿ ಹೇಳಿದ್ದಾರೆ.

ತನ್ನ 120 ರಕ್ಷಿತ ಸ್ಮಾರಕಗಳನ್ನು ವಕ್ಫ್ ಮಂಡಳಿಗಳು ತಮ್ಮವೆಂದು ಹೇಳಿಕೊಳ್ಳುತ್ತಿವೆ. ಈ ತಾಣಗಳಲ್ಲಿ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂದು ಭಾರತೀಯ ಪುರಾತತ್ವ ಇಲಾಖೆ (ಎ.ಎಸ್.ಐ.) ಹೇಳಿದೆ. ನಗರ ವ್ಯವಹಾರಗಳ ಸಚಿವಾಲಯ, ರಸ್ತೆ ಸಾರಿಗೆ ಸಚಿವಾಲಯ, ರೈಲ್ವೆ (4ನೇ ಪುಟಕ್ಕೆ)

# ಕೊಂಡಿ ಕಳಚಿ 2 ಭಾಗವಾದ ರೈಲು

ಪಾಟ್ನಾ, ಸೆ. 8 - ಮಗಧ್‌ಪುರ್ ಎಕ್ಸ್‌ಪ್ರೆಸ್ ರೈಲಿನ ಕೊಂಡಿ ಕಳಚಿ ರೈಲು ಎರಡು ಭಾಗವಾದ ಘಟನೆ ಬಿಹಾರದ ಬಕ್ಸಾರ್ ಜಿಲ್ಲೆಯಲ್ಲಿ ನಡೆದಿದೆ. ರೈಲು ದೆಹಲಿಯಿಂದ ಇಸ್ಲಾಂಪುರಕ್ಕೆ ತೆರಳುತ್ತಿತ್ತು.

ಬಕ್ಸಾರ್ ಜಿಲ್ಲೆಯ ಟ್ವಿನಿಗಂಜ್ ಹಾಗೂ ರಘುನಾಥಪುರ ರೈಲ್ವೆ ನಿಲ್ದಾಣಗಳ ನಡುವೆ ಘಟನೆ ನಡೆದಿದೆ. ಅವಘಡದಲ್ಲಿ ಯಾರೂ ಗಾಯಗೊಂಡಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾನುವಾರ ಬೆಳಿಗ್ಗೆ 11.08ರ ಸಮಯದಲ್ಲಿ ರೈಲಿನ ಕೊಂಡಿ ಕಳಚಿತ್ತು. ನಂತರ ಮಧ್ಯಾಹ್ನ 2.25ರ ವೇಳೆಗೆ ಸಮಸ್ಯೆ ಸರಿಪಡಿಸಲಾಯಿತು. ಘಟನೆಯ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ.


॥ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಕಾಕನೂರು ಗ್ರಾಮದ
ದಾವಣಗೆರೆ ಸಿಟಿ ಎಂಸಿಸಿ ಬಿ ಬ್ಲಾಕ್ ವಾಸಿ
ಶ್ರೀಮತಿ ಶ್ರೀ ಎಂ.ಸಿ. ಗಿರೀಶ್ ಶ್ರೀಮತಿ ಶ್ರೀ ಎಂ.ಸಿ. ಜಗದೀಶ್
ಇವರು ಮಾಡುವ ವಿಜ್ಞಾಪನೆಗಳು.



ಜನನ : 25-10-1941

ನಿಧನ : 29-08-2024

ದಿನಾಂಕ : 29-08-2024ನೇ ಗುರುವಾರ ಬೆಳಗಿನಜಾವ 12.45ಕ್ಕೆ ನಮ್ಮ ತಂದೆಯವರಾದ

**ಶ್ರೀ ಎಂ. ಚನ್ನಬಸಪ್ಪನವರು**

ನಿವೃತ್ತ ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ, ದಾವಣಗೆರೆ
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 9-09-2024ನೇ ಸೋಮವಾರ ಬೆಳಿಗ್ಗೆ 10-30ಕ್ಕೆ ಡಾ. ಸದ್ಯೋಜಾತ ಸ್ವಾಮಿ ಮಠ, ಎಂ.ಸಿ.ಸಿ. ಬಿ ಬ್ಲಾಕ್ ಶಿವಾಚಾರ್ಯ ನಿಕೇತನ ಹಿರೇಮಠ, ವಾಟರ್ ಟ್ಯಾಂಕ್ ಪಕ್ಕ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಸರಿತಾ, ಶ್ರೀ ಎಂಸಿ. ಗಿರೀಶ್ ಮತ್ತು ಮಕ್ಕಳು
ಶ್ರೀಮತಿ ಗಾಯತ್ರಿ, ಶ್ರೀ ಎಂ.ಸಿ ಜಗದೀಶ್ ಮತ್ತು ಮಕ್ಕಳು
ಶ್ರೀಮತಿ ಮಂಗಳ, ಶ್ರೀ ರಾಜಶೇಖರ್ ಮತ್ತು ಮಕ್ಕಳು
ಮಲ್ಲಪ್ಪ ವಂಶಸ್ಥರು, ಕಾಕನೂರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಎಲೆಮರೆಯ ಕಾಯಂತಿದ್ದ ವಾಣಿ ಬಕ್ಕೇಶ್‌ರಿಗೆ ಒಲಿದ ದೂಡಾ ಸದಸ್ಯತ್ವ

ದಾವಣಗೆರೆ ಫ್ಯಾಮಿಲಿ ಶೋರೂಂ ಅಭಿ ಕಾಟನ್ಸ್ ಮಾಲೀಕ ಬಕ್ಕೇಶ್ ನ್ಯಾಮತಿ ಪತ್ನಿ ವಾಣಿ

ಪತಿಯ ಸಾಧನೆ ಹಿಂದೆ ನೆರಳಾಗಿರುತ್ತಿದ್ದ ವಾಣಿ ಬಕ್ಕೇಶ ಸಕ್ರಿಯ ರಾಜಕೀಯಕ್ಕೆ ಪ್ರವೇಶ



ತುಂಬು ಕುಟುಂಬದ ಹಿನ್ನೆಲೆಯಿಂದ ಬಂದ ಡಿಪ್ಲೊಮಾ ಪದವೀಧರೆ ವಾಣಿ ಬಕ್ಕೇಶ್ ನ್ಯಾಮತಿ ತಮ್ಮ ತವರು ಮನೆ ಜೊತೆಗೆ ಗಂಡನ ಮನೆಗೂ ಬೆಳಕಾಗಿ, ಉಭಯ ಕುಟುಂಬಗಳ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ವ್ಯವಹಾರಿಕ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಜೊತೆಗೆ ಇದೀಗ ಸಕ್ರಿಯ ರಾಜಕಾರಣಕ್ಕೂ ಕಾಲಿಡುವ ಜೊತೆಗೆ ಬಡವರಿಗೆ ಸೂರು ಕಲ್ಪಿಸುವ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯೆಯಾಗಿ ನೇಮಕವಾಗಿ ಜನಸೇವೆಗೆ ಅಧಿಕೃತವಾಗಿ ಮುಂದಡಿ ಇಟ್ಟಿದ್ದಾರೆ.

ದಾವಣಗೆರೆಯ ಫ್ಯಾಮಿಲಿ ಶೋರೂಂ ಅಂತಲೆ ಕರೆಯಲ್ಪಡುವ ಇಲ್ಲಿನ ಕಾಳಿಕಾದೇವಿ ರಸ್ತೆಯ ಅಭಿ ಕಾಟನ್ಸ್ ಮಾಲೀಕ ಎನ್.ಬಕ್ಕೇಶ್ ನ್ಯಾಮತಿ ಅವರ ಪತ್ನಿ ವಾಣಿ ಬಕ್ಕೇಶ್ ತಮ್ಮ ಪತಿಗೆ ಹೆಗಲಿಗೆ ಹೆಗಲು ಕೊಟ್ಟು, ತಮ್ಮ ಗಂಡನ ಮನೆ ಹಾಗೂ ತವರು ಮನೆಯಲ್ಲಿ ಕಲಿತಿದ್ದ ಆದರ್ಶ ಗುಣಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ವರನಟ ಡಾ. ರಾಜಕುಮಾರರ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ಬಂದ ಬಕ್ಕೇಶ್ ನ್ಯಾಮತಿ ಅವರಿಗೆ ನೆರಳಾಗಿ ನಿಂತಿರುವವರು ವಾಣಿ.



ಅಭಿ ಕಾಟನ್ಸ್‌ಗೆ ಬರುವ ತಮ್ಮ ಗ್ರಾಹಕರನ್ನೇ ದೇವರೆಂದು ತಿಳಿದು, ತಮ್ಮ ವ್ಯವಹಾರದ ಜೊತೆಗೆ ಸಮಾಜ ಸೇವೆಯಲ್ಲೂ ತೊಡಗಿರುವ ಜನಾನುರಾಗಿ ಜೋಡಿ ಬಕ್ಕೇಶ್ ನ್ಯಾಮತಿ, ವಾಣಿ ಬಕ್ಕೇಶರದ್ದು. ಕೆರೆಯ ನೀರನ್ನು ಕೆರೆಗೆ ಚೆಲ್ಲು ಎಂಬ ನಾಣ್ಣುಡಿಗೆ ತಕ್ಕಂತೆ ತಮ್ಮ ದುಡಿಮೆಯ ಸಾಕಷ್ಟು ಭಾಗವನ್ನು ಪತಿ ಬಕ್ಕೇಶ ಸಮಾಜಮುಖಿ ಕಾರ್ಯಕ್ಕೆ ಬಳಸಿದರೆ, ಅದಕ್ಕೆ ಎಂದಿಗೂ ಆಕ್ಷೇಪಿಸದೇ ಪತಿಯ ಇಚ್ಛೆಯನರಿತು ನಡೆಯುವ ಸತಿ ಯಾಗಿ ಪತಿಯ ಸಾಧನೆಗೆ ಬೆನ್ನೆಲುಬಾಗಿದ್ದಾರೆ. ಇದೀಗ ಬಕ್ಕೇಶ್ ನ್ಯಾಮತಿ ಸಾಧನೆ, ಶ್ರಮದ ಪರಿಣಾಮ ದೂಡಾ ಸದಸ್ಯರಾಗಿ ವಾಣಿ ಬಕ್ಕೇಶ್‌ರಿಗೆ ಜನಸೇವೆಗೆ ಅಧಿಕೃತವಾಗಿ ಅವಕಾಶವೊಂದು ಸಿಕ್ಕಿದೆ.

**ಅಡಕೆ ವ್ಯಾಪಾರದಿಂದ ದೊಡ್ಡ ಬಟ್ಟೆ ಅಂಗಡಿ ಆರಂಭ**

ಪತಿ ಬಕ್ಕೇಶ್ ನ್ಯಾಮತಿ ಹಾಗೂ ಕುಟುಂಬ ವಾಣಿ ಬಕ್ಕೇಶ್‌ರಿಗೆ ಗಂಡನ ಮನೆಯ ವಾತಾವರಣ ನೀಡದೇ, ತವರು ಮನೆಯಲ್ಲಿದ್ದಂತಹ ವಾತಾವರಣವನ್ನೇ ನೀಡಿದ್ದರಿಂದ ಬಕ್ಕೇಶ್‌ರ ಪ್ರತಿ ಹೆಜ್ಜೆಯಲ್ಲೂ ವಾಣಿ ಬಕ್ಕೇಶ್‌ರ ಹೆಜ್ಜೆಯೂ ಇರುವುದನ್ನು ಕಾಣಬಹುದು. ನ್ಯಾಮತಿ ಸಣ್ಣಪ್ಪ(ಅಡಕಿ ಸಣ್ಣಪ್ಪ)ನವರ ಮಗ ಅಡಕಿ ಬಸವರಾಜಪ್ಪ, ರತ್ನಮ್ಮನವರ ಮಗ ಬಕ್ಕೇಶ್ ಎನ್. ನ್ಯಾಮತಿ ಮೂಲತಃ ತಮ್ಮ ಕುಟುಂಬದ ಕಸುಬಾದ ಅಡಕೆ ವ್ಯಾಪಾರವನ್ನ ಮಾಡಿಕೊಂಡು ಬಂದವರು. ನಂತರ ಕಿರಾಣಿ ವ್ಯಾಪಾರ ಆರಂಭಿಸಿದ್ದವರು. ದಾವಣಗೆರೆಯಲ್ಲೇ ಮೊದಲ ಬಾರಿಗೆ ಅಡಿಕೆ ಮಿಷನ್ ಇಟ್ಟ ಖ್ಯಾತಿ ಬಕ್ಕೇಶ್ ನ್ಯಾಮತಿಯವರಿಗೆ ಸಲ್ಲುತ್ತದೆ. ಇಂತಹ ವ್ಯವಹಾರಿಕ, ಧರ್ಮನಿಷ್ಠ, ದೇವರ ಮೇಲೆ ಅಪಾರ ಭಕ್ತಿ ಹೊಂದಿರುವ, ಜನಾನುರಾಗಿ, ಸಮಾಜಮುಖಿ ಸೇವೆಯ ಗುಣಗಳನ್ನು ಮೈಗೂಡಿಸಿಕೊಂಡ ಕುಟುಂಬದ ಸೊಸೆಯಾಗಿ ಬಂದ ತಮಗೆ ತಮ್ಮ ತವರು ಹಾಗೂ ಗಂಡನ ಮನೆಯ ಎಲ್ಲರೂ ಆದರ್ಶ ಎನ್ನುತ್ತಾರೆ ವಾಣಿ ಬಕ್ಕೇಶ್.





ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಲಿಂಗಾಯತ ಪಂಚಮಸಾಲಿ ಸಮಾಜದ ನನ್ನನ್ನು ಸದಸ್ಯರಾಗಿ ನೇಮಕ ಮಾಡುವ ಮೂಲಕ ನಮ್ಮ ಸಮಾಜದ ಹಿರಿಯ ನಾಯಕರಾದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನರವರು ನೀಡಿದ ಅವಕಾಶ ನೀಡಿದ್ದಾರೆ. ದೂಡಾ ಅಧ್ಯಕ್ಷರಾದ ದಿನೇಶ ಕೆ.ಶೆಟ್ಟಿಯವರು ಪ್ರೋತ್ಸಾಹ ನೀಡುತ್ತಿದ್ದಾರೆ. ದೂಡಾ ಸದಸ್ಯರಾಗಿ ಜನ ಮೆಚ್ಚುವಂತೆ ಕೆಲಸ ಮಾಡುವ ಗುರಿಯೊಂದಿಗೆ ಹೊಸ ಜವಾಬ್ದಾರಿ ವಹಿಸಿಕೊಂಡಿದ್ದೇನೆ. ನನ್ನ ಮೇಲೆ ನಂಬಿಕೆ, ವಿಶ್ವಾಸವಿಟ್ಟು ದೂಡಾ ಸದಸ್ಯರಾಗಿ ನೇಮಕ ಮಾಡಿದ್ದಕ್ಕೆ ನ್ಯಾಯ ಒದಗಿಸುವ ಕೆಲಸವನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ವಾಣಿ ಬಕ್ಕೇಶ್ ಹೇಳುತ್ತಾರೆ.

**ಎಸ್ಸೆಸ್, ಎಸ್ಸೆಸ್ಸೆಂ, ಡಾ.ಪ್ರಭಾರ ಮಾರ್ಗದರ್ಶನದಲ್ಲಿ ಕೆಲಸ**

ಒಗ್ಗಟ್ಟಿನ ಮಂತ್ರವೇ ಅಭಿವೃದ್ಧಿಯ ಮಂತ್ರವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ನಾಯಕರಾದ ಶಾಮನೂರು ಶಿವಶಂಕರಪ್ಪನವರು, ಸಚಿವ ಎಸ್.ಎಸ್.ಮಲ್ಲಿಕಾರ್ಜುನವರು, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನರ ಮಾರ್ಗದರ್ಶನದಲ್ಲಿ ದಾವಣಗೆರೆ-ಹರಿಹರ ಅವಳಿ ನಗರದಲ್ಲಿ ಹೊಸದಾಗಿ ಬಡಾವಣೆ ನಿರ್ಮಿಸಬೇಕೆಂಬ ಗುರಿಯನ್ನು ದೂಡಾ ಅಧ್ಯಕ್ಷ ದಿನೇಶ ಕೆ.ಶೆಟ್ಟಿ, ನಾವೆಲ್ಲ ಸದಸ್ಯರು ಹೊಂದಿದ್ದೇವೆ. ಎಲ್ಲರೂ ಪರಸ್ಪರ ವಿಶ್ವಾಸದಿಂದ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುತ್ತೇವೆ. ಎಲ್ಲರ ವಿಶ್ವಾಸವನ್ನು ಉಳಿಸಿಕೊಂಡು, ನಮ್ಮ ನಾಯಕರು ನನಗೆ ನೀಡಿರುವ ಅವಕಾಶವನ್ನು ಸಾರ್ಥಕ ಪಡಿಸಿಕೊಳ್ಳುತ್ತೇನೆ. ತಮ್ಮ ಪತಿ ಬಕ್ಕೇಶ್ ನ್ಯಾಮತಿ ಅವರ ಕಾರ್ಯವೈಖರಿಯ ಮೆಚ್ಚುಗೆಯಿಂದ ನನಗೂ ಗೌರವ ಸಿಗುತ್ತಿದೆ. ಈ ಎಲ್ಲರ ಹೆಸರು ಉಳಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವೆ ಎಂದು ಅವರು ಭರವಸೆ ನೀಡುತ್ತಾರೆ.

ಲಿಂಗಾಯತ ಪಂಚಮಸಾಲಿ ಸಮಾಜದ ವಾಣಿ ಬಕ್ಕೇಶ್ ನ್ಯಾಮತಿ ಅವರನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ನೇಮಕ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್ ಮಲ್ಲಿಕಾರ್ಜುನ, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ, ದೂಡಾ ಅಧ್ಯಕ್ಷ ದಿನೇಶ ಕೆ.ಶೆಟ್ಟಿ ಹಾಗೂ ಪಕ್ಷದ ನಾಯಕರಿಗೆ ಸಮಾಜದ ಮಠಾಧೀಶರಾದ ಕೂಡಲ ಸಂಗಮದ ಶ್ರೀ ಜಯ ಮೃತ್ಯುಂಜಯ ಸ್ವಾಮಿಜಿ, ಸಮಾಜ ಬಾಂಧವಸರು ಸಹ ದೂಡಾ ನೂತನ ಸದಸ್ಯೆ ವಾಣಿ ಬಕ್ಕೇಶ್‌ರಿಗೆ ಶುಭಾ ಹಾರೈಸುವುದರ ಜೊತೆಗೆ ಸಂತಸ ವ್ಯಕ್ತಪಡಿಸಿದ್ದಾರೆ.



**ತವರು ಮನೆಯಿಂದಲೇ ರಾಜಕೀಯದ ಬಗ್ಗೆ ಆಸಕ್ತಿ**

ಸದಾ ಎಲೆ ಮರೆಯ ಕಾಯಿಯಂತೆ ಬಕ್ಕೇಶ್ ನ್ಯಾಮತಿ ಜೊತೆಗೆ ನಿಂತವರು ವಾಣಿ. ಯಾವುದೇ ಪ್ರಚಾರ, ಆಡಂಬರ, ತೋರಿಕೆಯ ಕೆಲಸ ಮಾಡದೇ, ತಮ್ಮ ಮನಸ್ಸು, ದೇವರು ಮೆಚ್ಚುವಂತೆ ಕಾಯಕ ಮಾಡಿಕೊಂಡು ಬಂದವರು. ವಾಣಿ ಬಕ್ಕೇಶ್ ತಮ್ಮ ತಂದೆಯಾದ ಉಮಾ ಟ್ರೇಡರ್ಸ್ ಮಾಲೀಕ ಎಂ.ಜಿ.ರಾಜಣ್ಣ, ತಾಯಿ ಜಯಕೊಟ್ರಮ್ಮನವರ ಮುದ್ದಿನ ಮಗಳು. ತಂದೆ ಹಾಗೂ ತಾಯಿ ಜೊತೆಗೆ ಚಿಕ್ಕಪ್ಪ, ಮಾಜಿ ಮೇಯರ್ ಎಂ.ಜಿ. ಬಕ್ಕೇಶ್ ರಲ್ಲಿದ್ದ ಸರಳತೆ, ಬಡವರ ಬಗ್ಗೆ ಹೊಂದಿದ್ದ ಕಾಳಜಿ, ದೇವರ ಮೇಲಿನ ಶ್ರದ್ಧಾಭಕ್ತಿ ಸಹಜವಾಗಿಯೇ ವಾಣಿ ಬಕ್ಕೇಶ್ ರಿಗೆ ಕುಟುಂಬದಿಂದ ಬಳುವಳಿಯಾಗಿ ಬಂದಿದೆ.

ಬಡವರ ಬಗ್ಗೆ ಕಾಳಜಿ, ವ್ಯವಹಾರದಲ್ಲಿ ಧೈರ್ಯ, ಪ್ರಾಮಾಣಿಕ ಕಳಕಳಿ ಸಹಜವಾಗಿಯೇ ವಾಣಿ ಬಕ್ಕೇಶರಲ್ಲೂ ಕಾಣಬಹುದು. ಸ್ವಂತ ಕಾಲ ಮೇಲೆ ನಿಂತು ಬಾಳಬೇಕೆಂಬ ತವರು ಮನೆಯವರು ಕಲಿಸಿದ್ದ ಬದ್ಧತೆಯನ್ನು ರೂಢಿಸಿಕೊಂಡಿದ್ದ ವಾಣಿ ಬಕ್ಕೇಶ್ ಸುಮಾರು 35ಕ್ಕೂ ಹೆಚ್ಚು ಜನರ ಅವಿ ಭಕ್ತ ಕುಟುಂಬದ ಹಿನ್ನೆಲೆ ಹೊಂದಿರುವವರು. ಕೂಡು ಕುಟುಂಬದ ಕುಡಿಯಾಗಿ ಬಂದ ವಾಣಿ ಬಕ್ಕೇಶ್ ತಮ್ಮ ಗಂಡನ ಮನೆಯಲ್ಲೂ ಎಲ್ಲರ ಮನ ಗೆದ್ದವರು. ತಮ್ಮ ಚಿಕ್ಕಪ್ಪ, ಮಾಜಿ ಮೇಯರ್ ಎಂ.ಜಿ.ಬಕ್ಕೇಶ್ ಆಗ 13ನೇ ವಾರ್ಡ್‌ನಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲೂ ನಗರಸಭೆ, ಪಾಲಿಕೆ ಸದಸ್ಯನಾಗಿ, ಮೇಯರ್ ಆಗಿದ್ದು ವಾಣಿ ಬಕ್ಕೇಶ್ ರಲ್ಲಿ ರಾಜಕೀಯದ ಬಗ್ಗೆ ಆಸಕ್ತಿ ಮೂಡುವಂತೆ ಮಾಡಿತ್ತು.

**ದೂಡಾ ಕಚೇರಿಯಲ್ಲಿ ಅಹವಾಲು ಸ್ವೀಕಾರ...**

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಪ್ರತಿದಿನ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ದೂಡಾ ಕಚೇರಿಯಲ್ಲಿದ್ದು ದೂಡಾಗೆ ಸಂಬಂಧಿಸಿದ ಕುಂದು-ಕೊರತೆಗಳನ್ನು ಆಲಿಸುತ್ತೇನೆ.

- ವಾಣಿ ಬಕ್ಕೇಶ್, ಸದಸ್ಯರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ



# ಹರಿಹರದಲ್ಲಿ ಸಡಗರ - ಸಂಭ್ರಮದ ಮಾತೆ ಮೇರಿಯಮ್ಮ ರಥೋತ್ಸವ

ಹರಿಹರ,ಸೆ.8- ನಗರದ ಆರೋಗ್ಯ ಮಾತೆ ಬಸಲಿಕ ಚರ್ಚ್ ಮಾತೆ ಮೇರಿಯಮ್ಮನ ರಥೋತ್ಸವ ಶ್ರದ್ಧಾ-ಭಕ್ತಿ, ಸಡಗರ - ಸಂಭ್ರಮದಿಂದ ನಡೆಯಿತು.

ಆರೋಗ್ಯ ಮಾತೆಯ ಚರ್ಚ್ ನಲ್ಲಿ ಬೆಳಗಿನ ಜಾವದಿಂದ ಸಂಜೆಯವರೆಗೆ ಕ್ರೈಸ್ತ ಧರ್ಮದ ಅನುಸಾರವಾಗಿ ಅನೇಕ ಧರ್ಮಾಧ್ಯಕ್ಷರ ಸಮ್ಮುಖದಲ್ಲಿ ವಿವಿಧ ಭಾಷೆಯಲ್ಲಿ ವಿಶೇಷ ಪೂಜೆ, ಆರಾಧನೆ ಸೇರಿದಂತೆ ಹಲವು ಬಗೆಯ ಪೂಜಾ ಕಾರ್ಯಗಳು ನಡೆದವು.

ರಥೋತ್ಸವದ ಮೆರವಣಿಗೆಯಲ್ಲಿ ಬ್ಯಾಂಡ್ ಸೆಟ್, ಭಜನಾ ಮೇಳಗಳು, ಜೊತೆಗೆ ಧರ್ಮ ಸಂದೇಶಗಳನ್ನು ಬಿತ್ತರಿಸುವ ಕಾರ್ಯಗಳನ್ನು ಮಾಡಲಾಯಿತು.

ಮೆರವಣಿಗೆ ಆರೋಗ್ಯ ಮಾತೆಯ ಚರ್ಚ್‌ನಿಂದ ಪ್ರಾರಂಭಗೊಂಡು, ಹಳೆ ಪಿ.ಬಿ. ರಸ್ತೆ, ಟಿ.ಬಿ. ರಸ್ತೆಯ ಮೂಲಕ ಹಾದು, ತೇರುಗಡ್ಡೆಯಲ್ಲಿರುವ ಮೂಲ ಚರ್ಚ್‌ಗೆ ಭೇಟಿ ಕೊಟ್ಟು, ಅಲ್ಲೂ ಕೂಡ ಪ್ರಾರ್ಥನೆ ಸಲ್ಲಿಸಿ, ನಂತರ ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆಯಲ್ಲಿ ಸಂಚರಿಸಿ ಪುನಃ ಆರೋಗ್ಯ ಮಾತೆಯ ಚರ್ಚ್ ಆವರಣದಲ್ಲಿ ಅಂತ್ಯಗೊಂಡಿತು.

ನಾಡಿನಾದ್ಯಂತ ಆಗಮಿಸಿದ ಕ್ರೈಸ್ತ ಭಕ್ತರು ತಲೆ ಕೂದಲು ತೆಗೆಸಿ, ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ, ಅಲ್ಲಿಂದ ಚರ್ಚ್ ನವರಿಗೆ ದೀಡ್ ನಮಸ್ಕಾರ ಹಾಕಿ, ಮಾತೆಗೆ ಹೂವು, ಹಣ್ಣು-ಕಾಯಿ, ಮೇಣದ ಬತ್ತಿಯನ್ನು ಭಕ್ತಿಯಿಂದ ಅರ್ಪಣೆ ಮಾಡುವುದರೊಂದಿಗೆ ಆರೋಗ್ಯ ಮಾತೆಯ ಆಶೀರ್ವಾದ ಪಡೆದುಕೊಂಡರು.

ನಿನ್ನೆಯಿಂದ ವಿವಿಧ ಕಡೆಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು, ಚರ್ಚ್ ಆವರಣ, ನಗರಸಭೆ ಆವರಣ, ಜಿ.ಬಿ. ಎಂ.ಎಸ್. ಶಾಲೆ ಆವರಣ, ಮೈದಾನ ಸೇರಿದಂತೆ ರಸ್ತೆಯ ಪಕ್ಕದಲ್ಲಿ ವಾಸ್ತವ್ಯ ಹೂಡಿದ್ದರು.

ಸೇವಂತಿಗೆ ಹೂವಿನಿಂದ ಅಲಂಕರಿಸಿದ ರಥೋತ್ಸವದಲ್ಲಿ ಮಾತೆ ಮೇರಿಯಮ್ಮನನ್ನು ಪ್ರತಿಷ್ಠಾಪಿಸಿ, ನಾಡಿನಾದ್ಯಂತದಿಂದ ಆಗಮಿಸಿದ ಭಕ್ತರ ಸಮ್ಮುಖದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ನಾಡಿನ ವಿವಿಧ ನಗರಗಳಿಂದ ಆಗಮಿಸಿದ ಕ್ರೈಸ್ತ ಧರ್ಮದ ಭಕ್ತರು ರಥೋತ್ಸವದ ಮೇಲೆ ಹೂವು, ಕಲ್ಲು ಸಕ್ಕರೆ, ಬಾದಾಮಿ ಹಾಕುವುದರ ಮೂಲಕ ಭಕ್ತಿ ಸಮರ್ಪಣೆ ಮಾಡಿದರು.

ಈ ವೇಳೆ ಫಾ. ಕೆ.ಎ. ಜಾರ್ಜ್ ಮಾತನಾಡಿ, ಯೇಸುವಿನ ತ್ಯಾಗ, ಬಲಿದಾನ ಮಾದರಿಯಾಗಬೇಕು. ಆರೋಗ್ಯ ಮಾತೆಯ ಸಂದೇಶಗಳನ್ನು, ಪರಸ್ಪರ ಪ್ರೀತಿಸವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಹಾದಿಯಲ್ಲಿ ಸಾಗಬೇಕು ಎಂದು ಹೇಳಿದರು.

## ಆರೋಗ್ಯ ಮಾತೆಗೆ ದೀಡ್ ನಮಸ್ಕಾರ, ಹರಕೆ ಸಲ್ಲಿಸಿದ ಭಕ್ತರು



ಹರಿಹರ, ಸೆ.8- ನಗರದ ಆರೋಗ್ಯ ಮಾತೆಯ ಬಸಲಿಕ ಚರ್ಚ್‌ನಲ್ಲಿ ನಡೆಯುತ್ತಿರುವ ಮಾತೆ ಮೇರಿಯಮ್ಮನ ಜಾತ್ರಾ ಮಹೋತ್ಸವ ಅಂಗವಾಗಿ ಕ್ರೈಸ್ತ ಧರ್ಮದ ಭಕ್ತರು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ, ನದಿಯ ದಡದಿಂದ ಆರೋಗ್ಯ ಮಾತೆಯ ಚರ್ಚಿನವರಗೂ ದೀಡ್ ನಮಸ್ಕಾರ ಹಾಕಿ, ಮತ್ತು ತಲೆ ಕೂದಲು ಹರಕೆಯನ್ನು ತೀರಿಸುವ ಮೂಲಕ ಭಕ್ತಿ ಸಮರ್ಪಿಸಿದರು.

## ನಗರದಲ್ಲಿ ಕುರಿ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯ ಕೀಯ ತರಬೇತಿ ಕೇಂದ್ರದಲ್ಲಿ ಇಂದು ಮತ್ತು ನಾಳೆ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಆಯೋಜಿಸಲಾಗಿದೆ. ವಿವರಕ್ಕೆ 08192-233787.

## ಶೈಕ್ಷಣಿಕ ಶುಲ್ಕ ಮರುಪಾವತಿಗೆ ಅರ್ಜಿ

ದಾವಣಗೆರೆ,ಆ.22- ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಪಡೆದ ಕ್ರೀಡಾಪಟುಗಳಿಗೆ ಪ್ರಸಕ್ತ ಸಾಲಿಗೆ ಶೈಕ್ಷಣಿಕ ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 18 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿಗೆ ಸಲ್ಲಿಸಲು ಸಹಾಯಕ ನಿರ್ದೇಶಕಿ ಜಯಲಕ್ಷ್ಮಿಬಾಯಿ ತಿಳಿಸಿದ್ದಾರೆ.

## ಶಿವಕುಮಾರಸ್ವಾಮಿ ಬಡಾವಣೆಯಲ್ಲಿ 2ನೇ ಹಂತದಲ್ಲಿ ಗಣಪ

ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ 2 ನೇ ಹಂತದಲ್ಲಿರುವ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ 18 ನೇ ವರ್ಷದ ಶ್ರೀ ಗಣೇಶೋತ್ಸವದ ಅಂಗವಾಗಿ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದ ಗಣೇಶ ವಿಸರ್ಜನೆ ಕಾರ್ಯಕ್ರಮವು ಇಂದು ಸಂಜೆ 4 ಕ್ಕೆ ಡೊಳ್ಳು ಕುಣಿತ ಸೇರಿದಂತೆ ವಿವಿಧ ವಾದ್ಯಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ವೈಭವದಿಂದ ಜರುಗಲಿದೆ.

# ಯಾವುದೇ ಕೆಲಸ ಕನಿಷ್ಠ ಅಲ್ಲ, ಗರಿಷ್ಠವೂ ಅಲ್ಲ, ಶ್ರದ್ಧೆ ಮುಖ್ಯ

## ಪತ್ರಿಕಾ ವಿತರಕರ 4ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ಸಾಣೇಹಳ್ಳಿಯ ಪಂಡಿತಾರಾಧ್ಯ ಸ್ವಾಮೀಜಿ

ಚಿತ್ರದುರ್ಗ, ಸೆ. 8 - ಜ್ಞಾನವನ್ನು ಕೊಡುವಂತಹ ಕೆಲಸವನ್ನು ಮೀಡಿಯಾಗಳು ಮಾಡುತ್ತವೆ. ಅವುಗಳನ್ನು ತಲುಪಿಸುವ ಕೆಲಸವನ್ನು ವಿತರಕರು ಮಾಡುತ್ತಾರೆ. ಸಮಾಜದಲ್ಲಿ ದೊಡ್ಡವರು ಕಾಣಿಸಿಕೊಳ್ಳುತ್ತಾರೆ. ಆದರೆ ಅವರ ಹಿಂದೆ ಕೆಲಸ ಮಾಡುವವರು ಕಾಣಿಸಿಕೊಳ್ಳುವುದಿಲ್ಲ. ಸಮಾಜದಲ್ಲಿ ಯಾವುದೇ ಕೆಲಸ ಕನಿಷ್ಠ ಅಲ್ಲ, ಗರಿಷ್ಠ ಅಲ್ಲ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ನಿಜವಾದ ಆರೋಗ್ಯವಂತರೆಂದರೆ ವಿತರಕರು. ಏಕೆಂದರೆ ಅವರು ಬೆಳಿಗ್ಗೆ ಬೇಗ ಏಳುತ್ತಾರೆ. ಸೈಕಲ್ ತುಳಿಯುತ್ತಾರೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಿಕಾ ಹಂಚಿಕೆದಾರರ, ವಿತರಕರ ಸಂಘದ ವತಿಯಿಂದ ನಗರದ ಮುರುಘಾಮಠದ ಅನುಭವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ವಿತರಕರ 4ನೇ ರಾಜ್ಯಮಟ್ಟದ ಸಮ್ಮೇಳನದ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿತರಕರಿಗೆ ಮುಖ್ಯವಾಗಿ ಬೇಕಾಗಿರುವುದು ಒಂದು ವಾಹನ, ಒಂದು ನಿವೇಶನ ಹಾಗೂ ಅವರ ಮಕ್ಕಳಿಗೆ ಶಿಕ್ಷಣ. ಇವುಗಳನ್ನು ಒದಗಿಸಲು ಕ್ರಮ ವಹಿಸಿದರೆ ವಿತರಕರು ನೆಮ್ಮದಿಯಿಂದ ಬದುಕುತ್ತಾರೆ. ಕಾಯಕ ಶ್ರದ್ಧೆ ಯಾರಲ್ಲಿ ಇರುತ್ತೋ ಅವರು ಯಾವತ್ತೂ ಸೋಲಲ್ಲ. ಅದಕ್ಕೆ ಉದಾಹರಣೆ ವಿಜಯ ಸಂಕೇಶ್ವರ್ ಅವರು ಎಂದು ಶ್ಲಾಘಿಸಿದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, ಜನತಂತ್ರ ವ್ಯವಸ್ಥೆಯಲ್ಲಿ ನಿಜವಾದ ಪ್ರಮುಖ ಪಾತ್ರ ವಹಿಸುವವರು ಮುದ್ರಣ ಮಾಧ್ಯಮದವರು. ಹಾಲು ಹಾಕುವವರು, ಪೋಸ್ಟ್ ಮ್ಯಾನ್‌ಗಳ ಸೇವೆಗಿಂತ ತ್ವರಿತವಾಗಿ ಪತ್ರಿಕಾ ವಿತರಕರು ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ರಾಷ್ಟ್ರಪತಿಯಾಗಿದ್ದ ಅಬ್ದುಲ್ ಕಲಾಂ ಅವರು ಪತ್ರಿಕಾ ವಿತರಕರಾಗಿ ಕೆಲಸ ಮಾಡಿದ್ದಾರೆ. ಅಷ್ಟೇ ಅಲ್ಲದೆ ರಾಷ್ಟ್ರದಲ್ಲಿ ಎಷ್ಟೋ ವಿದ್ಯಾರ್ಥಿಗಳು ಪತ್ರಿಕಾ ವಿತರಣೆ ಮಾಡಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಮಾತನಾಡಿ, ಪತ್ರಿಕಾ ವಿತರಕರು ಅಸಂಘಟಿತ ಸಮುದಾಯವಾಗಿದ್ದಾರೆ. ರಾಜ್ಯದಲ್ಲಿ ಸುಮಾರು 40 ಸಾವಿರ ಪತ್ರಿಕಾ ವಿತರಕರಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಿಕಾ ವಿತರಕರ ನೆರವಿಗೆ ಧಾವಿಸಿದ್ದಾರೆ. ಕಾರ್ಮಿಕ ಇಲಾಖೆಯಲ್ಲಿ ಇ-ಶ್ರಮ್ ಅಡಿ ನೋಂದಣಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಕರ್ತವ್ಯ ನಿರ್ವಹಿಸುವ ವೇಳೆ ಏನಾದರೂ ಅವಘಡ ಗಳು ಸಂಭವಿಸಿದಲ್ಲಿ ಪರಿಹಾರ ಲಭ್ಯವಾಗಲಿದೆ. ವಿತರಕರ ಕ್ಷೇಮಾಭಿವೃದ್ದಿಗೆ ಕನಿಷ್ಠ ಹತ್ತು ಕೋಟಿ ರೂ. ಮೀಸಲಿಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಎಂದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮಾತನಾಡಿ, ಪತ್ರಿಕಾ ವಿತರಕರಿಗೆ ಅಗತ್ಯವಿರುವ ಸೌಲಭ್ಯಗಳ ಬಗ್ಗೆ ಪಟ್ಟಿ ಮಾಡಿ ಸರ್ಕಾರಕ್ಕೆ ವರದಿ ನೀಡಲಾಗುವುದು. ವಿತರಕರ ಮಕ್ಕಳಿಗೆ ಆರೋಗ್ಯ ವ್ಯವಸ್ಥೆ ಮಾಡಬೇಕಿದೆ. ಕಡಿಮೆ ಬಡ್ಡಿ ಸಾಲದ ವ್ಯವಸ್ಥೆ ಮಾಡಬೇಕು ಎನ್ನುವುದು ವಿತರಕರ ಆಗ್ರಹವನ್ನು ಸರ್ಕಾರ ಪರಿಗಣಿಸಲಿದೆ ಎಂದು ಹೇಳಿದರು.

ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್ ನವೀನ್, ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ, ವಿ.ಆರ್. ಎಲ್ ಸಂಸ್ಥೆಯ ಮುಖ್ಯಸ್ಥರಾದ ವಿಜಯ ಸಂಕೇಶ್ವರ್, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಜಾಪ್ರಗತಿ ಸಂಪಾದಕ ನಾಗಣ್ಣ, ಹಿರಿಯ ಪತ್ರಿಕಾ ವಿತರಕ ಜನರಪ್ಪ, ರಾಜ್ಯಾಧ್ಯಕ್ಷ ಶಂಭುಲಿಂಗಪ್ಪ, ಚಿತ್ರದುರ್ಗ ಜಿಲ್ಲಾ ಕಾರ್ಯನಿರತ ಪತ್ರಿಕಾ ಹಂಚಿಕೆದಾರರ, ವಿತರಕ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಿನೇಶ್ ಗೌಡಗೆರೆ, ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ತಾಜ್ ಪೀರ್, ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಜಗದೀಶ್, ಐ.ಎಫ್.ಡಬ್ಲ್ಯೂ ಜೆಯ ಅಧ್ಯಕ್ಷ ಮಲ್ಲಿಕಾರ್ಜುನ್, ಪ್ರಕಾಶ್ ನಾಯ್ಕ್, ನಾಗವೇಣಿ ಸೇರಿದಂತೆ ಇತರರು ಭಾಗವಹಿಸಿದ್ದರು.

## ಹೊನ್ನಾಳಿಯಲ್ಲಿ ಇಂದು ಬಿಜೆಪಿ ಪ್ರತಿಭಟನೆ

ಹೊನ್ನಾಳಿ, ಸೆ.8- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕು ಬಿಜೆಪಿಯಿಂದ ನಾಳೆ ದಿನಾಂಕ 9 ರ ಸೋಮವಾರ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಹಾಗೂ ಜನವಿರೋಧಿ ನೀತಿ ಖಂಡಿಸಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಮಾಜಿ ಸಚಿವ ರೇಣುಕಾಚಾರ್ಯ ಹೇಳಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಮಳೆಯಿಂದ ಹಾನಿಯಾದ ಜಮೀನುಗಳ ರೈತರಿಗೆ ಪರಿಹಾರ ನೀಡುವಂತೆ, ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ ಜೋಡಣೆ ನೀತಿ ಖಂಡಿಸಿ, ತಾಲ್ಲೂಕಿನಲ್ಲಿ ಸುರಿದ ಮಳೆಗೆ ಬಿದ್ದ ಮನೆಗಳಿಗೆ ಬಿಜೆಪಿ ಸರ್ಕಾರದಂತೆ ಪರಿಹಾರ ಮುಂದುವರೆಸುವಂತೆ, ಸ್ಟ್ಯಾಂಪ್ ಡ್ಯೂಟಿ ದರ ಹೆಚ್ಚಳದಿಂದ ರೈತರು ಮತ್ತು ಜನಸಾಮಾನ್ಯರಿಗೆ ಆಗುತ್ತಿರುವ ಆರ್ಥಿಕ ಹೊರೆ ಇನ್ನಿತರೆ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿ ಖಂಡಿಸಿ ಹೋರಾಟ ನಡೆಸಲಾಗುವುದೆಂದರು.

ಪಕ್ಷದ ಮುಖಂಡ ಜೆ.ಕೆ. ಸುರೇಶ್ ಮಾತನಾಡಿ, ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಹೇಳಿದರು. ಗೋಷ್ಠಿಯಲ್ಲಿ ಮಾರುತಿನಾಯ್ಕ, ಅರಕೆರೆ ನಾಗರಾಜ, ಶಿವಾನಂದ, ಸುರೇಂದ್ರನಾಯ್ಕ ಇನ್ನಿತರರಿದ್ದರು.

## ಎಡಿಎಲ್‌ಆರ್ ಬಳ್ಳಾರಪ್ಪಗೆ ಸನ್ಮಾನ



ಹರಪನಹಳ್ಳಿ

ಹರಪನಹಳ್ಳಿ, ಸೆ. 8 - ತಾಲ್ಲೂಕು ಭೂಮಾಪನ ಇಲಾಖೆಯಲ್ಲಿ ಎಡಿಎಲ್‌ಆರ್ ಆಗಿದ್ದ ಕೆ. ಬಳ್ಳಾರಪ್ಪ ಅವರು ಇತ್ತೀಚೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಕಚೇರಿ ಸಿಬ್ಬಂದಿ ಅವರನ್ನು ಸನ್ಮಾನಿಸಿ, ಗೌರವಿಸಿದರು. ಈ ಸಂದರ್ಭದಲ್ಲಿ ಕಂದಾಯ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ನೂತನ ಎಡಿಎಲ್‌ಆರ್ ವೆಂಕಟೇಶ, ಅಧೀಕ್ಷಕ ಸಣ್ಣ ಓಬ್ಬಯ್ಯ, ತಪಾಸಕಿ ಜಯಲಕ್ಷ್ಮಿ, ಕೌಸರ್, ಭೂಮಾಪಕರು ಸಿಬ್ಬಂದಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ದೊಡ್ಡಾಟ ಪ್ರದರ್ಶನ

ದೊಡ್ಡಪೇಟೆಯ ಶ್ರೀ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ವಿನಾಯಕ ಮಹೋತ್ಸವದ ಅಂಗವಾಗಿ ಇಂದು ಸಂಜೆ 7.30 ಕ್ಕೆ 'ಶ್ರೀ ಮೈಲಾರಲಿಂಗೇಶ್ವರ ಮಹಾತ್ಮೆ ಅರ್ಥಾತ್ ಮಣಿ ಮಲ್ಲಾಸುರ ವಧೆ' ದೊಡ್ಡಾಟ ಪ್ರದರ್ಶನ ಏರ್ಪಡಿಸಲಾಗಿದೆ. ಹಾನಗಲ್ ತಾಲ್ಲೂಕಿನ ಕಲಕೇರಿ ಗ್ರಾಮದ ಶ್ರೀ ಬಸವೇಶ್ವರ ದೊಡ್ಡಾಟ ಮಂಡಳಿ ಕಲಾವಿದರು ಪ್ರದರ್ಶಿಸಲಿದ್ದಾರೆ.

## ನಗರದಲ್ಲಿ ಇಂದು ಈಜು ಕ್ರೀಡಾಕೂಟ

ದಾವಣಗೆರೆ, ಸೆ. 8- ತೋಳಹುಣಸೆ ಬಳಿ ಇರುವ ಪಿಎಸ್‌ಎಸ್‌ಇಎಂಆರ್ ಶಾಲಾವರಣದಲ್ಲಿ ದಕ್ಷಿಣ ವಲಯ-2 ಸಿಬಿಎಸ್‌ಇ ಮಾಧ್ಯಮ ಶಾಲೆಗಳ ಈಜು ಕ್ರೀಡಾಕೂಟವನ್ನು ನಾಳೆ ದಿನಾಂಕ 9 ರ ಸೋಮವಾರ ಸಂಜೆ 4 ಗಂಟೆಗೆ ಚಾಲನೆ ನೀಡಲಾಗುವುದು ಎಂದು ಶಾಲೆಯ ಕನ್ನಡ ಶಿಕ್ಷಕ ಶಂಕರ್ ನೆಶ್ವಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸ್ಪರ್ಧೆಯಲ್ಲಿ ಎರಡು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಬಾಲಕ-ಬಾಲಕಿಯರು ಪಾಲ್ಗೊಳ್ಳಲಿದ್ದಾರೆ. ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಗೋವಾ, ಡಿಯು, ದಾಮನ್ ರಾಜ್ಯಗಳ ಸಿಬಿಎಸ್‌ಇ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ನಾಳೆ ಸಂಜೆ 4 ಗಂಟೆಗೆ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಎಸ್.ಎಸ್. ಗಣೇಶ್ ಸ್ಪರ್ಧೆ ಉದ್ಘಾಟಿಸಲಿದ್ದಾರೆ.

ಸೆ. 14 ರಿಂದ 18 ರವರೆಗೆ ಕ್ಲಸ್ಟರ್ ಮಟ್ಟದ ಕಬಡ್ಡಿ ಟೂರ್ನಿಯು ದಾವಣಗೆರೆಯ ಎಂಬಿಎ ಕಾಲೇಜು ಮೈದಾನದಲ್ಲಿ ನಡೆಯಲಿದ್ದು, ಸೆ. 26 ರಿಂದ 30 ರವರೆಗೆ ಶಿವಗಂಗೋತ್ರಿಯ ಪಿಎಸ್‌ಎಸ್‌ಇಎಂಆರ್ ಶಾಲಾ ಆವರಣದಲ್ಲಿ ಕ್ಲಸ್ಟರ್ ಮಟ್ಟದಲ್ಲಿ ಅಥ್ಲೆಟಿಕ್ಸ್ ಕ್ರೀಡಾಕೂಟ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಪ್ರಾಚಾರ್ಯ ಅರುಣ್ ಪ್ರಸಾದ್, ಉಪ ಪ್ರಚಾರ್ಯ ಹೆಚ್.ಜಿ. ಉಮಾಪತಿ, ವಿಲ್ಸನ್ ಉಪಸ್ಥಿತರಿದ್ದರು.

## 12 ರಂದು ಉದ್ಯೋಗ ಮೇಳ

ದಾವಣಗೆರೆ, ಸೆ.8- ಶಿಶಿಕ್ಷ ತರಬೇತಿ ಸಂಸ್ಥೆ, ಚೆನ್ನೈ (ದಕ್ಷಿಣ ವಲಯ) ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ನಗರದ ಬಾಪೂಜಿ ಪಾಲಿಟೆಕ್ನಿಕ್‌ನಲ್ಲಿ ಇದೇ ದಿನಾಂಕ 12 ರ ಬೆಳಗ್ಗೆ 9.30ಕ್ಕೆ ನೇರ ಸಂದರ್ಶನದಲ್ಲಿ ಅಪ್ರೆಂಟಿಶಿಪ್ ಮೇಳ ಹಾಗೂ ಉದ್ಯೋಗ ಮೇಳ ನಡೆಯಲಿದೆ.

ಸರ್ಕಾರಿ ಕಂಪನಿಗಳು ಮತ್ತು ಬಹು ರಾಷ್ಟ್ರೀಯ ಕಂಪನಿಗಳು ಈ ಮೇಳದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ 2020, 2021, 2022, 2023 ಮತ್ತು 2024 ಸಾಲಿನಲ್ಲಿ ತೇರ್ಗಡೆ ಹೊಂದಿದ ಯಾವುದೇ ವಿಭಾಗದ (ಟೆಕ್ನಿಕಲ್ ಅಂಡ್ ನಾನ್ ಟೆಕ್ನಿಕಲ್) ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ಅಭ್ಯರ್ಥಿಗಳು ಹಾಗೂ ಬಿಎ, ಬಿ.ಎಸ್ಸಿ ಬಿಕಾಂ, ಬಿಬಿಎ ಮತ್ತು ಬಿಸಿಎ ಪದವಿ ಪಡೆದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ವೆಬ್ಸೈಟ್: www.boat-srp.com-Home page -News & Events section.. ವೀಕ್ಷಿಸಬಹುದು. ದೂ.ಸಂ: 9945251906, 9916013954 ಸಂಪರ್ಕಿಸಬಹುದು. NATS Portal (https://nats.education.gov.in & Google Form Link: (https://forms.gle/jkCKDEre-jAWsqbt69)) ನ್ಯಾಟ್ಸ್ ಪೋರ್ಟಲ್, ಗೂಗಲ್ ಫಾರಂ ಲಿಂಕ್ ಅನ್ನು ಬಳಸಿ ನೋಂದಾಯಿಸಿ ಪ್ರಿಂಟ್ ಕಾಪಿಯನ್ನು ಕಡ್ಡಾಯವಾಗಿ ತರಬೇಕು ಎಂದು ಕಾಲೇಜಿನ ಪ್ರಾಂಶುಪಾಲರಾದ ಪುಷ್ಪಾಲತಾ ನಾಡಿಗ್ ತಿಳಿಸಿದ್ದಾರೆ.


## ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಸೆ. 8 - 2023 ನೇ ಸಾಲಿಗೆ ಜೀವಮಾನ ಸಾಧನೆ ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸುವ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

ಅರ್ಹರು ವೆಬ್‌ಸೈಟ್: https://sevasindhuservices-karnataka.gov.in ನಲ್ಲಿ ಇದೇ ದಿನಾಂಕ 20 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 08192-237480 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.


## ಕೈಲಾಸ ಶಿವಗಣಾರಾಧನೆ ಆಹ್ವಾನ



॥ ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ॥

ಶ್ರೀಮತಿ ಮಂಗಳಗೌರಮ್ಮ ಮತ್ತು ಮಕ್ಕಳು, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 5-09-2024ನೇ ಗುರುವಾರ ಬೆಳಿಗ್ಗೆ 6.00 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕಾತರಕಿ ಹತ್ತಿ ಷಣ್ಮುಖಪ್ಪನವರು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 9-09-2024ನೇ ಸೋಮವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ದೊಡ್ಡಪೇಟೆ ಬಸವ ಮಂಟಪದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಮಂಗಳಗೌರಮ್ಮ ಮತ್ತು ಮಕ್ಕಳು, ಮೃತರ ಸಹೋದರರು, ಸಹೋದರಿಯರು, ಕಾತರಕಿ ಹತ್ತಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ : 96863 99117, 94488-72970


## ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಜಿ.ನಿಜಲಿಂಗಪ್ಪ ನಿಧನ



ಸಾಣೇಹಳ್ಳಿ, ಸೆ.8- ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ನಿವೃತ್ತ ಆಡಳಿತಾಧಿಕಾರಿಯಾಗಿದ್ದ ನಿರ್ಥಡಿಯ ಜಿ. ನಿಜಲಿಂಗಪ್ಪ ಅವರು ಶನಿವಾರ ನಿಧನ ಹೊಂದಿದ್ದು, ಅವರ ಪಾರ್ಥಿವ ಶರೀರಕ್ಕೆ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಪುಷ್ಪ ನಮನದ ಶ್ರದ್ಧಾಂಜಲಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಶ್ರೀಗಳು, ನಿಜಲಿಂಗಪ್ಪ ಅವರಿಗೆ ಸ್ವಾಮಿಗಳಾದ ನಮ್ಮ ಬಗ್ಗೆ ಅಪಾರ ಗೌರವ, ಪ್ರೀತಿ ಇತ್ತು. ನಿಸ್ಪೃಹ ಸೇವೆ ಸಲ್ಲಿಸಿದಂಥವರು.

ಅವರಿಗೆ ಮನೆ ಮತ್ತು ಮಠ ಬೇರೆ ಬೇರೆ ಎನ್ನುವ ಭಾವನೆ ಇರಲಿಲ್ಲ. ಯಾವಾಗಲೂ ಮಠ ಅಥವಾ ಆಡಳಿತ ಕಛೇರಿಯಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದರು. ಕಛೇರಿಯ ಎಲ್ಲ ಸಿಬ್ಬಂದಿಗಳನ್ನು ಜೊತೆಯಲ್ಲೇ ಕರೆದುಕೊಂಡು ಮಠದಲ್ಲಿ ಪ್ರಸಾದ ಮಾಡುತ್ತಿದ್ದರು ಎಂದು ನಿಜಲಿಂಗಪ್ಪ ಅವರ ಸರಳತೆಯನ್ನು ಸ್ಮರಿಸಿದರು.

ಹಿರಿಯ ಜಗದ್ಗುರುಗಳ ಪ್ರೀತಿ, ವಿಶ್ವಾಸ ಗಳಿಸಿಕೊಂಡಂತೆ, ಡಾ. ಜಗದ್ಗುರುಗಳ ಹಾಗೂ ನಮ್ಮ ಪ್ರೀತಿ ವಿಶ್ವಾಸಕ್ಕೂ ಭಾಜನರಾಗಿದ್ದರು. ನಿವೃತ್ತಿಯಾದ ನಂತರವೂ ಮಠದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು ಎಂದು ಶ್ರೀಗಳು ಹೇಳಿದರು.

ಸಮಾಜದಲ್ಲಿ ಶ್ರೀಮಂತರಿಗಿಂತ ಹೆಚ್ಚು ಬೆಲೆ ಇರುವುದು ಜನಪರ ಕಾಳಜಿಯನ್ನಿಟ್ಟುಕೊಂಡು, ಒಲವನ್ನು ತೋರಿಸಿ, ಪ್ರೀತಿ, ವಿಶ್ವಾಸವನ್ನು ಬೆಳೆಸಿಕೊಂಡವರಿಗೆ. ಅಂತಹ ವ್ಯಕ್ತಿ ಬಡವನಾಗಿದ್ದರೂ ಅವನ ಬಗ್ಗೆ ಪ್ರೀತಿ, ಗೌರವ ತೋರಿಸುವರು. ಶ್ರೀಮಂತರು ದರ್ಪ, ದೌರ್ಜನ್ಯವನ್ನು ತೋರಿಸಿದರೆ ಅವರ ಹಣಕ್ಕೆ ತಲೆಬಾಗುವುದು ವಿರಳ. ಆ ನೆಲೆಯಲ್ಲಿ ನಿಜಲಿಂಗಪ್ಪನವರು ಎಲ್ಲರ ಪ್ರೀತಿ, ವಿಶ್ವಾಸ ಗಳಿಸಿಕೊಂಡಿದ್ದಾರೆ. ಆದ್ದರಿಂದ ಮನೆತನದವರು ನಿಜಲಿಂಗಪ್ಪನವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸೂಚ್ಯವಾಗಿ ತಿಳಿಸಿದರು.


## ನಾಲ್ಕನೇ ವರ್ಷದ ಪುಣ್ಯಸ್ಮರಣೆ





| ನಾಲ್ಕನೇ ವರ್ಷದ ಪುಣ್ಯ ಸ್ಮರಣೆ | ದ್ವಿತೀಯ ವರ್ಷದ ಪುಣ್ಯ ಸ್ಮರಣೆ | ನಾಲ್ಕನೇ ವರ್ಷದ ಪುಣ್ಯ ಸ್ಮರಣೆ |
|---|---|---|
| **ಲಿಂ. ಶ್ರೀ ಬಾಳೆಹೊಲದ ಮರುಳಸಿದ್ದಪ್ಪ** | **ಲಿಂ. ಶ್ರೀಮತಿ ಬಾಳೆಹೊಲದ ಗುರುಸಿದ್ದಮ್ಮ** | **ಶರಣ ಶ್ರೀ ಬಾಳೆಹೊಲದ ಬಸವರಾಜ** |
| ಹಿರಿಯ ಸ್ವಾತಂತ್ರ್ಯಹೋರಾಟಗಾರರು ಮತ್ತು ವರ್ತಕರು | ಬಾಳಹೊಲದ ಮರುಳಸಿದ್ದಪ್ಪನವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಇವರ ಧರ್ಮಪತ್ನಿ | ಮಾಜಿ ನಿರ್ದೇಶಕರು, ಶಿವ ಸಹಕಾರಿ ಬ್ಯಾಂಕ್ ಮತ್ತು ವರ್ತಕರು |
| ನಿಧನ : 09.09.2020 | ನಿಧನ : 16.08.2022 | ನಿಧನ : 26.09.2020 |

ನೀವು ನಮ್ಮನ್ನಗಲಿ ನಾಲ್ಕು ವರ್ಷಗಳು ಕಳೆದರೂ, ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ದಿ.ಬಾಳೆಹೊಲದ ಮರುಳಸಿದ್ದಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಳಿಯಂದಿರು ಬಾಳೆಹೊಲದ ವಂಶಸ್ಥರು ಹಾಗೂ ಬಂಧು ಮಿತ್ರರು.



## ಪ್ರಥಮ ಪುಣ್ಯ ಸ್ಮರಣೆ



**ದಿ. ಶ್ರೀಮತಿ ಲಲಿತಮ್ಮ**

ದಿ. ಪಿ.ಆರ್.ಶಿವಕುಮಾರ್ ಇವರ ಧರ್ಮಪತ್ನಿ

ಶಿರಮಗೊಂಡನಹಳ್ಳಿ, ದಾವಣಗೆರೆ


ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

ಶ್ರೀ ಅನಿಲ್‌ಕುಮಾರ್ ಮತು ಸಹೋದರ ಮತ್ತು ಸಹೋದರಿಯರು ಹಾಗು ಮಕ್ಕಳು

ಗೌಡ್ರು ವಂಶಸ್ಥರು, ಶಿರಮಗೊಂಡನಹಳ್ಳಿ, ಕಬ್ಬಳದ ವಂಶಸ್ಥರು, ಬೆಳವನೂರು



## ತುಂಬಿಗೆರೆ ರುದ್ರಪ್ಪ ನಿಧನ



ದಾವಣಗೆರೆ ವಿನೋಬನಗರದ ನಿವಾಸಿ, ಬಿರ್ಲಾ ಕಂಪನಿಯ ನಿವೃತ್ತ ನೌಕರರಾದ

**ಶ್ರೀ ತುಂಬಿಗೆರೆ ರುದ್ರಪ್ಪ**

ಇವರು ದಿನಾಂಕ 8.9.2024ರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತ ರುದ್ರಪ್ಪನವರು **'ದಾವಣಗೆರೆ ಕನ್ನಡಿಗ'** ಸಂಪಾದಕರಾದ ರವಿ ಅವರ ಮಾವ.

ಮೃತರ ಅಂತ್ಯಕ್ರಿಯೆಯಯನ್ನು ದಿನಾಂಕ 9.09.2024ರ ಸೋಮವಾರ ಮಧ್ಯಾಹ್ನ 2ಕ್ಕೆ ದಾವಣಗೆರೆ ತಾಲ್ಲೂಕಿನ ತುಂಬಿಗೆರೆ ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು.**



## ಅಲ್‌ಹಜ್ ಮೊಹಮ್ಮದ್ ಇಸ್ಮಾಯಿಲ್ ನಿಧನ



ದಾವಣಗೆರೆ ಕೆಟಿಜೆ ನಗರ, 3ನೇ ಮೇನ್, 3ನೇ ಕ್ರಾಸ್ ವಾಸಿ ಸಿ.ಜಿ. ಆಸ್ಪತ್ರೆಯ ನಿವೃತ್ತ ಸಿಬ್ಬಂದಿಯಾದ ಅಲ್‌ಹಜ್ ಮೊಹಮ್ಮದ್ ಇಸ್ಮಾಯಿಲ್ (84) ಅವರು ದಿನಾಂಕ 9.9.2024ರ ಸೋಮವಾರ ಬೆಳಿಗ್ಗೆ 1ಕ್ಕೆ ನಿಧನರಾದರು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.9.2024ರ ಸೋಮವಾರ ಸಂಜೆ 5ಕ್ಕೆ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

**ನೇತ್ರ ದಾನ ಶ್ರೇಷ್ಠ ದಾನ**

# ನಗರದಾದ್ಯಂತ ಸಡಗರ - ಸಂಭ್ರಮದ ಶ್ರೀ ಗಣೇಶ ಮಹೋತ್ಸವ


ದೊಡ್ಡಪೇಟೆಯ ಶ್ರೀ ಗಣೇಶ ದೇವಸ್ಥಾನದಲ್ಲಿ ಒಣ ಕೊಬ್ಬರಿ ಗಣಪ ಅಲಂಕಾರ


ಜೈಹಿಂದ್ ಕೆರೆ ಗರಡಿ, ಮದಕರಿ ನಾಯಕ ವೃತ್ತ


ಶ್ರೀ ಬೀರಲಿಂಗೇಶ್ವರ, ಕಟ್ಟಿದುರ್ಗಮ್ಮ ಗೆಳೆಯರ ಬಳಗ


ಡ್ರೀಮ್ ಬಾಯ್ಸ್ ಯುವಕರ ಸಂಘ, ಬಿಐಇಟಿ ರಸ್ತೆ


ಶ್ರೀರಾಮ್ ಯುವ ಸೇನೆ, ವಿದ್ಯಾನಗರ


ಓಂ ಯುವಕರ ಸಂಘ, ಆಂಜನೇಯ ಬಡಾವಣೆ ವೃತ್ತ


ಸೈ ಗ್ರೂಪ್, ಬಿಐಇಟಿ ರಸ್ತೆ


ಹಿಂದೂ ಮಹಾಸಭಾ ಗಣಪತಿ, ಎಂ.ಸಿ.ಸಿ. ಬಿ ಬ್ಲಾಕ್


ಸೃಜನಶೀಲ ಬಳಗ, ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್


ಶ್ರೀ ನವಭಾರತ ವಿಘ್ನೇಶ್ವರ ಯುವಕರ ಸಂಘ


ಶ್ರೀರಾಮ್ ಸೇನಾ, ಆಂಜನೇಯ ಬಡಾವಣೆ, 13ನೇ ಕ್ರಾಸ್


ಶ್ರೀ ನವಭಾರತ ವಿಘ್ನೇಶ್ವರ ಯುವಕರ ಸಂಘ


ಶ್ರೀರಾಮ್ ಸೇನೆ, ಆಂಜನೇಯ ಬಡಾವಣೆ, 13ನೇ ಕ್ರಾಸ್


ಶ್ರೀ ರಾಮನ ಅವತಾರದಲ್ಲಿ ವಿನಾಯಕ, ಸ್ವಾಗೇರಪೇಟೆ


ಜಿಲ್ಲಾ ನ್ಯಾಯಾಲಯದಲ್ಲಿ ಗಣೇಶೋತ್ಸವ


ಕಾಡಜ್ಜಿ ಸರ್ಕಲ್‌ನಲ್ಲಿ ಶ್ರೀ ಗಣೇಶ ಮಹೋತ್ಸವ


ಪೊಲೀಸ್ ಕ್ವಾರ್ಟ್ರಸ್, ಅರುಣಾ ಟಾಕೀಸ್ ರಸ್ತೆ



ಬಂಬೂ ಬಜಾರ್‌ನ ಗೂಡ್ಸ್ ಆಟೋ ಚಾಲಕರ ಸಂಘದಿಂದ ಪ್ರತಿಷ್ಠಾಪಿಸಿರುವ ಶ್ರೀ ಗಣೇಶ ಮೂರ್ತಿ


ಶ್ರೀ ಗಜಾನನ ಫ್ರೆಂಡ್ಸ್ ಗ್ರೂಪ್, ವಿದ್ಯಾನಗರ


ವಿಜಯನಗರ ಬಡಾವಣೆಯ ವಿನಾಯಕ ಬಳಗ


ಶಾಮನೂರಿನ ಶ್ರೀ ಆಂಜನೇಯ ದೇವಸ್ಥಾನದ ಪಕ್ಕದಲ್ಲಿ
ಶ್ರೀ ವಿನಾಯಕ ಸ್ನೇಹ ಬಳಗದಿಂದ ಸಮುದ್ರ ಮಂಥನ ರೂಪದಲ್ಲಿ ಗಣೇಶ ಪ್ರತಿಷ್ಠಾಪನೆ


ಕುಂಬಳೂರು ಗ್ರಾಮದ ಶ್ರೀ ಗಂಗಾಪರಮೇಶ್ವರಿ
ದೇವಸ್ಥಾನದಲ್ಲಿ 33 ನೇ ವರ್ಷದ ಗಣಪತಿ ಪ್ರತಿಷ್ಠಾಪನೆ


ಮಹಾರಾಜಪೇಟೆಯ ವಿಠ್ಠಲ ಮಂದಿರದಲ್ಲಿ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿಯಿಂದ ಶ್ರೀ ಸಂತ ಜಗದ್ಗುರು
ತುಕಾರಾಮ ಮಹಾರಾಜರು ಮತ್ತು ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ಭೇಟಿಯ ರೂಪದಲ್ಲಿ ಗಣಪತಿ ದೇವರ ದೃಶ್ಯ.



## ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಪೇಪರ್ ಗಣೇಶ

ದಾವಣಗೆರೆ, ಸೆ.7 - ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಪರಿಸರ ಸ್ನೇಹಿ 12 ಅಡಿ ಎತ್ತರದ ಪೇಪರ್ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ.

ವಿದ್ಯಾರ್ಥಿಗಳ ಸಹಾಯದಿಂದ ಶಾಲೆಯ ಚಿತ್ರಕಲಾ ಶಿಕ್ಷಕರಾದ ಪ್ರಶಾಂತ್ ಕುಮಾರ್, ಸ್ವಾತಿ, ಹೀನ ಕೌಸರ್, ಮುಜಸ್ಸಿಂ, ಸಹನಾ ಹಾಗೂ ಶಾಲಾ ಮಕ್ಕಳ ಕೈ ಚಳಕದಲ್ಲಿ ಮೂಡಿಬಂದಿರುವ ಈ ಗಣಪನನ್ನು ಸಂಪೂರ್ಣವಾಗಿ ಕಾಗದ, ಮೈದಾ ಅಂಟು ಮತ್ತು ಇದ್ದಿಲಿನ ಪುಡಿಯಿಂದ ನಿರ್ಮಿಸಲಾಗಿದೆ.

ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಗಾಂಧಿ ವೃತ್ತದಿಂದ ರಥದಲ್ಲಿ ಕೂರಿಸಿ ಅಶೋಕ ರಸ್ತೆ, ಜಯದೇವ ಸರ್ಕಲ್, ಅಂಬೇಡ್ಕರ್ ಸರ್ಕಲ್, ವಿದ್ಯಾರ್ಥಿ ಭವನ ಸರ್ಕಲ್ ಮೂಲಕ ಮೆರವಣಿಗೆಯಲ್ಲಿ ತಂದು ಶಾಲೆಯ ಸುಂದರ ಮಂಟಪದಲ್ಲಿ ಪ್ರತಿಷ್ಠಾಪಿಸಿದರು.

ಸಾಂಪ್ರದಾಯಿಕ ಉಡುಗೆ ತೊಟ್ಟ ವಿದ್ಯಾರ್ಥಿಗಳು ಮೆರವಣಿಗೆಯುದ್ದಕ್ಕೂ ಗಣಪನ ಭಕ್ತಿ ಪ್ರಧಾನ ಗೀತೆಗಳಿಗೆ ಹೆಜ್ಜೆ ಹಾಕುತ್ತಾ ನಡುನಡುವೆ ಘೋಷಣೆ ಕೂಗಿದರು.

ಸಂಸ್ಥೆಯ ನಿರ್ದೇಶಕ ಡಾ. ಜಯಂತ್, ಕಾರ್ಯದರ್ಶಿ ಡಿ. ಎಸ್. ಹೇಮಂತ್, ಸಂಸ್ಥೆಯ ಮುಖ್ಯಸ್ಥೆ ಡಾ ಜಸ್ಟಿನ್ ಡಿ ಸೌಜ ಈ ಸಂದರ್ಭದಲ್ಲಿದ್ದರು.

## ವಿಜಯನಗರ ಬಡಾವಣೆಯಲ್ಲಿ ಇಂದು ಅನ್ನ ಸಂತರ್ಪಣೆ

ದಾವಣಗೆರೆ : ನಗರದ ಆರ್‌ಟಿಓ ಆಫೀಸ್ ಹತ್ತಿರ, ವಿಜಯನಗರ ಬಡಾವಣೆಯ 3ನೇ ಕ್ರಾಸ್‌ನಲ್ಲಿ ವಿನಾಯಕ ಬಳಗದ ವತಿಯಿಂದ ವಿನಾಯಕ ಮೂರ್ತಿ ಸ್ಥಾಪಿಸಿದ್ದು, ಮೂರನೇಯ ದಿನವಾದ ಇಂದು ಗಣೇಶ ವಿಸರ್ಜನೆ ಪ್ರಯುಕ್ತ ಮಧ್ಯಾಹ್ನ ಅನ್ನ ಸಂತರ್ಪಣೆ ಏರ್ಪಡಿಸಿದೆ. ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಎಂದು ಬಳಗದ ವತಿಯಿಂದ ಮಂಜುನಾಥ್ ಹೊಸಮನಿ, ಪ್ರವೀಣ ಸವಣೂರು, ಶಿವಮೂರ್ತಿ, ಸಚಿನ್, ಅಜಯ್, ಸತೀಶ್, ನಿವಾಸಿಗಳಾದ ಬ್ರಹ್ಮಚಾರ್, ಜಿ.ಎಸ್.ವಿರೂಪಾಕ್ಷಪ್ಪ, ವೀರಯ್ಯ ಸ್ವಾಮಿ ಮತ್ತಿತರರು.

## ಕುಂಬಳೂರಿನಲ್ಲಿ ಇಂದು ಅನ್ನ ಸಂತರ್ಪಣೆ, ಗಣಪತಿ ವಿಸರ್ಜನೆ

ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಶ್ರೀ ಗಂಗಾಪರಮೇಶ್ವರಿ ದೇವಸ್ಥಾನದಲ್ಲಿ 33 ನೇ ವರ್ಷದ ಗಣಪತಿ ಪ್ರತಿಷ್ಠಾಪನೆ ಮಾಡಲಾಗಿದ್ದು, ಇಂದು ಸೋಮವಾರ ಸಂಜೆ ಅನ್ನಸಂತರ್ಪಣೆ ಹಾಗೂ ಭರ್ಜರಿ ಮೆರವಣಿಗೆ ಮೂಲಕ ವಿಸರ್ಜನೆಗೊಳ್ಳಲಿದೆ.

# ಒಳಮೀಸಲಾತಿಗೆ ಆಗ್ರಹಿಸಿ ಇಂದು ದಸಂಸ ಪ್ರತಿಭಟನೆ

ದಾವಣಗೆರೆ, ಸೆ. 8- ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ತೀರ್ಪಿನ ಅನ್ವಯ ಪರಿಶಿಷ್ಟರ ಮೀಸಲಾತಿ ಯಲ್ಲಿ ಒಳಮೀಸಲಾತಿಯನ್ನು ಜಾರಿಗೆ ತರಬೇಕೆಂದು ಆಗ್ರಹಿಸಿ ನಾಳೆ ದಿನಾಂಕ 9 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಸಮಿತಿ ಜಿಲ್ಲಾಧ್ಯಕ್ಷ ಕುಂದುವಾಡ ಮಂಜುನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ಬೆಳಿಗ್ಗೆ 11 ಕ್ಕೆ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದ ನಂತರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸುವುದಾಗಿ ಹೇಳಿದರು.

ಪರಿಶಿಷ್ಟ ಜಾತಿಗಳ ಮೀಸಲಾತಿಯು 101 ಪರಿಶಿಷ್ಟ ಜಾತಿಗಳಲ್ಲಿ ಸಮನಾಗಿ ಹಂಚಿಕೆಯಾಗಿಲ್ಲ. ಆದ್ದರಿಂದ ಪರಿಶಿಷ್ಟರ ಮೀಸಲಾತಿಯನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಣ ಮಾಡಲು ಒತ್ತಾಯಿಸಿ ಕಳೆದ ಮೂರು ದಶಕಗಳಿಂದ ನಿರಂತರವಾಗಿ ಹೋರಾಟಗಳು ನಡೆಯುತ್ತಿವೆ ಎಂದರು.

ಪರಿಶಿಷ್ಟ ಜಾತಿಗಳ ಮೀಸಲಾತಿ ವರ್ಗೀಕರಿಸಿ ಒಳಮೀಸಲಾತಿ ಕಲ್ಪಿಸಲು ಆಗ್ರಹಿಸಿ ನಡೆಸಿದ ಹೋರಾಟಕ್ಕೆ ಮಣಿದ ರಾಜ್ಯ ಸರ್ಕಾರ 2004 ರಲ್ಲಿ ಎ.ಜೆ. ಸದಾಶಿವ ಆಯೋಗ ರಚಿಸಿತು. ಆಯೋಗ ಸರ್ಕಾರಕ್ಕೆ ದಿನಾಂಕ 14-6-2012 ರಂದು ವರದಿ ಸಲ್ಲಿಸಿತು. ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಈಗಿನ ಸಿಎಂ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಹ ಪರಿಶಿಷ್ಟರ ಮೀಸಲಾತಿ ವರ್ಗೀಕರಣ ಮಾಡುವ ನಿರ್ಣಯವನ್ನು ಸಚಿವ ಸಂಪುಟದಲ್ಲಿ ಅನುಮೋದಿಸಿ ದಿನಾಂಕ 17-3-2024 ರಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು ಎಂದು ಮಾಹಿತಿ ನೀಡಿದರು.



ಪರಿಶಿಷ್ಟರ ಮೀಸಲಾತಿ ವರ್ಗೀಕರಣಕ್ಕಾಗಿ ವಿವಿಧ ರಾಜ್ಯಗಳ ಆಯೋಗದ ವರದಿಗಳು ಮತ್ತು ಕೋರ್ಟ್‌ಗಳ ಹಲವು ತೀರ್ಪುಗಳನ್ನು ಪರಾಮರ್ಶಿಸಿದ ಸುಪ್ರೀಂಕೋರ್ಟ್ ನ ಏಳು ನ್ಯಾಯಾಧಿಶರ ಸಂವಿಧಾನ ಪೀಠ ಐತಿಹಾಸಿಕ ತೀರ್ಪು ನೀಡಿತ್ತು. ಈ ತೀರ್ಪಿನಲ್ಲಿ ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಒಳಮೀಸಲಾತಿ ನೀಡುವ ಸಂವಿಧಾನಬದ್ಧ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂದು ತೀರ್ಪು ನೀಡಿದೆ. ಆದ್ದರಿಂದ ಸುಪ್ರಿಂ ಕೋರ್ಟ್‌ನ ಏಳು ನ್ಯಾಯಾಧೀಶರ ತೀರ್ಪಿನಂತೆ ಪರಿಶಿಷ್ಟರ ಮೀಸಲಾತಿಯಲ್ಲಿ ಒಳಮೀಸಲಾತಿ ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳಾದ ಹೆಚ್.ಕೆ. ಕೊಟ್ರೇಶ್, ಹರೀಶ್, ಅಜ್ಜಂಪುರ ಹೆಚ್. ಅಣ್ಣಪ್ಪ ಸ್ವಾಮಿ, ಕೊಟ್ರೇಶ್ ಉಪಸ್ಥಿತರಿದ್ದರು.



# ಮಲೇಬೆನ್ನೂರಿನಲ್ಲಿ ಗಮನ ಸೆಳೆಯುವ ಗಣಪತಿಗಳು

ಮಲೇಬೆನ್ನೂರು, ಸೆ.8- ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಶ್ರೀ ಗಣೇಶ ಚತುರ್ಥಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಎಲ್ಲರ ಮನೆಗಳಲ್ಲಿ ಗೌರಿ-ಗಣಪತಿ ಸಾಮಾನ್ಯವಾಗಿ ಪೂಜೆಯೊಂದಿಗೆ ಹಬ್ಬವನ್ನು ಸರಳವಾಗಿ ಆಚರಿಸಿದರು.

**ಪ್ರತಿಷ್ಠಾಪನೆ :** ಪಟ್ಟಣದ ನೀರಾವರಿ ಇಲಾಖೆಯ ಮೈದಾನದಲ್ಲಿ 3ನೇ ವರ್ಷದ ಹಿಂದೂ ಮಹಾಗಣಪತಿಯನ್ನು ವಿಶೇಷ ಪೂಜೆಯೊಂದಿಗೆ ಶನಿವಾರ ಪ್ರತಿಷ್ಠಾಪಿಸಲಾಯಿತು.

ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಎಂ.ವಾಗೀಶ್ ಸ್ವಾಮಿ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡರಾದ ಚಂದ್ರಶೇಖರ್ ಪೂಜಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ.ಮಂಜುನಾಥ್, ಕೆ.ಜಿ.ಲೋಕೇಶ್, ಬಿ.ವೀರಯ್ಯ, ಭಾನುವಳ್ಳಿ ಸುರೇಶ್, ಪಿ.ಆರ್.ರಾಜು, ಕೆ.ಪಿ. ಗಂಗಾಧರ್, ಎ.ಆರೀಫ್ ಅಲಿ, ಎಕ್ಕೆಗೊಂದಿ ಕರಿಯಪ್ಪ, ಬಸವರಾಜ್ ದೊಡ್ಮನಿ, ಭೋವಿಕುಮಾರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೇಚಿಕ್ಕನಹಳ್ಳಿ, ಎ.ಕೆ. ಲೋಕೇಶ್, ಸುಬ್ಬಿ ರಾಜಣ್ಣ, ರವಿ ಮೇದಾರ್, ಆರ್ಟ್ಸ್ ಮಂಜು, ದೊರೆಸ್ವಾಮಿ, ಹೊಸಳ್ಳಿ ಕರಿಬಸಪ್ಪ, ಬಟ್ಟೆ ಅಂಗಡಿ ವಿಶ್ವ, ಜಿಗಳಿ ಹನುಮಗೌಡ, ಗೌಡ್ರ ಶ್ರೀನಿವಾಸ್, ಸಂಜು, ಕಿರಣ್, ದೇವರಾಜ್, ಕಡೇಮನಿ ಮಂಜು, ಕೊಮಾರನಹಳ್ಳಿ ಸುನೀಲ್, ಪೂಜಾರ್ ಬೀರಪ್ಪ, ಪೂಜಾರ್ ನಾರಾಯಣಪ್ಪ, ಪೂಜಾರ್ ನಾಗರಾಜ್, ಕಡ್ಲೆಗೊಂದಿ ಕೇಶವ, ಸಂಗಮೇಶಣ್ಣ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ಡಿವೈಎಸ್ಪಿ ಬಸವರಾಜ್, ಸಿಪಿಐ ಸುರೇಶ್ ಸಗರಿ, ಪಿಎಸ್ಐ ಪ್ರಭು ಕೆಳಗಿನಮನಿ ಅವರು ಭೇಟಿ ನೀಡಿದ್ದರು. ಪಟ್ಟಣದ ಕಾಳಿಕಾದೇವಿ ದೇವಸ್ಥಾನ, ಕಲ್ಲೇಶ್ವರ ದೇವಸ್ಥಾನ, ಕಾಲಭೈರವ ದೇವಸ್ಥಾನದ ಏಕನಾಥೇಶ್ವರಿ ದೇವಸ್ಥಾನ, ದುರ್ಗಾಂಬಿಕೆ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿರುವ ಗಣಪತಿಗಳೂ ಎಲ್ಲರ ಗಮನ ಸೆಳೆಯುತ್ತಿವೆ.

## ಕಟ್ಟಡ ಕುಸಿದು 8 ಸಾವು

ಲಖ್ನೌ, ಸೆ. 8 - ಉತ್ತರ ಪ್ರದೇಶದ ಲಖ್ನೌದಲ್ಲಿ ಕಟ್ಟಡ ವೊಂದು ಕುಸಿದು ಎಂಟು ಜನ ಸಾವನ್ನಪ್ಪಿದ್ದಾರೆ. ಟ್ರಾನ್ಸ್‌ಪೋರ್ಟ್ ನಗರ ಪ್ರದೇಶದಲ್ಲಿದ್ದ ಮೂರು ಅಂತಸ್ತಿನ ಕಟ್ಟಡ ಶನಿವಾರ ಕುಸಿದಿತ್ತು. ಘಟನೆ ಯಲ್ಲಿ 28 ಜನ ಗಾಯಗೊಂಡಿದ್ದಾರೆ.

ಇನ್ನಷ್ಟು ಜನರು ಅವಶೇಷಗಳಗಡಿ ಸಿಲುಕಿರುವ ಸಾಧ್ಯತೆ ಕಡಿಮೆ ಎಂದು ಜಂಟಿ ಪೊಲೀಸ್ ಆಯುಕ್ತ ಅಮಿತ್ ವರ್ಮ ತಿಳಿಸಿದ್ದಾರೆ. ನಾಲ್ಕು ವರ್ಷ ಗಳ ಹಿಂದೆ ಈ ಕಟ್ಟಡ ಕಟ್ಟಲಾಗಿತ್ತು. ಕಟ್ಟಡದ ಒಂದು ಭಾಗವನ್ನು ನಿರ್ಮಿ ಸುತ್ತಿರುವಾಗ ಕುಸಿತ ಸಂಭವಿಸಿದೆ. ಮೃತರೆಲ್ಲರೂ ನೆಲಮಹಡಿಯಲ್ಲಿ ಕೆಲಸ ಮಾಡುತ್ತಿದ್ದವರಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

# ಲಂಬೋದರನಿಗೆ ಸ್ವಾಗತ

**(1ನೇ ಪುಟದಿಂದ)** ದೇವಾಲಯದ ಮಾದರಿ ನಿರ್ಮಾಣ ಮಾಡಲಾಗಿದೆ. 18ಅಡಿ ಎತ್ತರದ ಆಕರ್ಷಕ ಶಿವರೂಪಿ ವಿನಾಯಕನ ಮೂರ್ತಿ ಪ್ರತಿಷ್ಠಾಪಿಸಲಾಯಿತು.

ತೊಗಟವೀರ ಸಮುದಾಯ ಭವನದಲ್ಲಿ ಹಿಂದೂ ಯುವ ಶಕ್ತಿ ವತಿಯಿಂದ 33ನೇ ವರ್ಷದ ಶ್ರೀ ವಿನಾಯಕ ಮಹೋತ್ಸವ ಆಚರಿಸಲಾಗುತ್ತಿದ್ದು, ಈ ಬಾರಿ 51 ಕೆ.ಜಿ. ಒಣ ದ್ರಾಕ್ಷಿ ಬಳಸಿ ನಿರ್ಮಿಸಿದ 12 ಅಡಿ ಎತ್ತರದ ಗಣೇಶನನ್ನುಪ್ರತಿಷ್ಠಾಪಿಸಲಾಗಿದೆ. ದಿನಾಂಕ 17ರವರೆಗೆ ವೀಕ್ಷಣೆಗೆ ಅವಕಾಶವಿದೆ.

ಹರಳೆಣ್ಣೆ ಕೊಟ್ರ ಬಸಪ್ಪ ವೃತ್ತದಲ್ಲಿ 32ನೇ ವರ್ಷದ ವಿನಾಯಕ ಮಹೋತ್ಸವದ ಅಂಗವಾಗಿ 8 ಅಡಿ ಎತ್ತರದ, ವಿರಾಜಮಾನವಾಗಿ ಕುಳಿತಿರುವ ಗಣಪತಿ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಪ್ರತಿ ದಿನ ಸಂಜೆ 'ಭಗೀರಥ ಪ್ರಯತ್ನ' ಕುರಿತ ನೃತ್ಯ ರೂಪಕ ಇರಲಿದೆ. ದಿನಾಂಕ 11ರಂದು ಅನ್ನ ಸಂತರ್ಪಣೆ, ದಿನಾಂಕ 17 ರಂದು ವಿಸರ್ಜನೆ ನಡೆಯಲಿದೆ.

ಎಸ್.ಕೆ.ಪಿ.ದೇವಸ್ಥಾನ ರಸ್ತೆಯಲ್ಲಿರುವ ವಾಸವಿ ಯುವಜನ ಸಂಘದಿಂದ 43ನೇ ವಿನಾಯಕ ಮಹೋತ್ಸವ ಆಚರಿಸಲಾಯಿತು. ದಿನಾಂಕ 15ರ ಭಾನುವಾರ ವಿಸರ್ಜನೆ ನಡೆಯಲಿದ್ದು, ಅಲ್ಲಿಯವರೆಗೆ ಪ್ರತಿ ದಿನ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ ಲೇಸರ್ ಶೋ ಮೂಲಕ ಶಿವ ಪಾರ್ವತಿ ಕಲ್ಯಾಣೋತ್ಸವ ಪ್ರದರ್ಶನ ನಡೆಯಲಿದೆ.

ಎಂ.ಸಿ.ಸಿ. ಎ ಬ್ಲಾಕ್ ಸೂಪರ್ ಮಾರ್ಕೆಟ್ ಬಳಿಯ ಹಿಂದೂ ಯುವ ಸೇನೆ ವತಿಯಿಂದ 17ನೇ ವರ್ಷದ ವಿನಾಯಕ ಮಹೋತ್ಸವ ಆಚರಿಸಲಾಗುತ್ತಿದೆ. 17 ರಂದು ಸಂಜೆ 7ಕ್ಕೆ ವಿಶೇಷ ದೀಪೋತ್ಸವವಿದೆ. ದಿನಾಂಕ 20 ರಂದು ಅನ್ನ ಸಂತರ್ಪಣೆ ನಂತರ. ದಿನಾಂಕ 22ರಂದು ಬೃಹತ್ ಶೋಭಾಯಾತ್ರೆ ಮೂಲಕ ವಿಸರ್ಜನೆ ನಡೆಯಲಿದೆ.

# ವಕ್ಫ್ : ಸಮಿತಿ ಆಸ್ತಿ ಜಟಾಪಟಿ

**(1ನೇ ಪುಟದಿಂದ)** ಮಂಡಳಿಗಳೂ ಸಹ ತಮ್ಮ ಆಸ್ತಿಗಳ ಬಗ್ಗೆ ದೂರು ದಾಖಲಿಸಿವೆ. ವಕ್ಫ್ ಮಂಡಳಿಗಳು ಅಕ್ರಮವಾಗಿ ಆಸ್ತಿ ತಮ್ಮದೆಂದು ಹೇಳುತ್ತಿವೆ ಎಂದು ಸಚಿವಾಲಯಗಳು ಹೇಳಿವೆ. ಸರ್ಕಾರ ವಕ್ಫ್ ಮಂಡಳಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿರುವುದನ್ನು ಸಚಿವಾಲಯಗಳು ಬೆಂಬಲಿಸಿವೆ.

ಕಳೆದ ಶುಕ್ರವಾರ ನಡೆದ ಸಭೆಯಲ್ಲಿ ಎ.ಎಸ್.ಐ. ತನ್ನ 53 ರಕ್ಷಿತ ಸ್ಮಾರಕಗಳ ವಿವರಗಳನ್ನು ಸಲ್ಲಿಸಿದೆ. ಇವುಗಳನ್ನು ರಕ್ಷಿತ ಆಸ್ತಿಗಳೆಂದು ಘೋಷಿಸಿದ ನಂತರ ಹಲವು ರಾಜ್ಯಗಳ ವಕ್ಫ್ ಮಂಡಳಿಗಳು ಈ ಆಸ್ತಿ ತಮ್ಮದೆಂದು ಹೇಳಿಕೊಳ್ಳುತ್ತಿವೆ ಎಂದು ತಿಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸಂಬಂಧಿಸಿದ ಎಲ್ಲರಿಂದ ಮಾಹಿತಿ ಪಡೆಯಲು ಸಮಿತಿಯು ದಿನವಿಡೀ ಸಭೆಗಳನ್ನು ನಡೆಸುತ್ತಿದೆ. ಬರುವ ಚಳಿಗಾಲದ ಅಧಿವೇಶನದ ಮೊದಲ ವಾರದ ಒಳಗೆ ಸಮಿತಿ ತನ್ನ ವರದಿಯನ್ನು ಸಲ್ಲಿಸಬೇಕಿದೆ.

# ಪಾಟೀಲ್‌ದ್ವಯರ ಜಟಾಪಟಿ

**(1ನೇ ಪುಟದಿಂದ)** ಆಸೆ ಇಲ್ಲ. ಆದರೆ, ಎಂ.ಬಿ. ಪಾಟೀಲರಿಗಿಂತ ಹಲವರು ಹಿರಿಯರಿದ್ದಾರೆ. ಹೀಗಾಗಿ ಎಂ.ಬಿ. ಪಾಟೀಲ್ ಮುಖ್ಯಮಂತ್ರಿಯಾಗಲು ಬೆಂಬಲಿಸುವುದಿಲ್ಲ ಎಂದು ಶಿವಾನಂದ ಪಾಟೀಲ್ ಹೇಳಿದ್ದರು.

ಇದಕ್ಕೆ ತಿರುಗೇಟು ನೀಡಿದ ಸಚಿವ ಎಂ.ಬಿ. ಪಾಟೀಲ್, ಹಿರಿತನ ಒಂದೇ ಮಾನದಂಡವಲ್ಲ ಎಂದು ಹೇಳಿದ್ದಾರೆ. ನಾನೂ ಕಾಂಗ್ರೆಸ್‌ನಲ್ಲಿ ಹಿರಿಯನಿದ್ದೇನೆ. 1991ಕ್ಕಿಂತ ಮೊದಲಿನಿಂದಲೂ ಕಾಂಗ್ರೆಸ್‌ನಲ್ಲಿದ್ದೇನೆ. ಶಿವಾನಂದ ಪಾಟೀಲರ ಮಾನದಂಡದಲ್ಲೇ ನೋಡಿದರೆ ನಾನು ಒಂದಲ್ಲಾ ಒಂದು ದಿನ ಮುಖ್ಯಮಂತ್ರಿಯಾಗುತ್ತೇನೆ ಎಂದು ಪಾಟೀಲ್ ಹೇಳಿದ್ದಾರೆ.

ನನಗೆ ಮುಖ್ಯಮಂತ್ರಿ ಸ್ಥಾನದ ಆಸೆ ಇದೆಯೇ ಹೊರತು ದುರಾಸೆ ಇಲ್ಲ. ಈಗ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆ. ಮುಂದೆಯೂ ಅವರು ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದೂ ಎಂ.ಬಿ. ಪಾಟೀಲ್ ಹೇಳಿದ್ದಾರೆ. ಶಿವಾನಂದ ಪಾಟೀಲರು ಇತ್ತೀಚೆಗಷ್ಟೇ ಜನತಾದಳ ಹಾಗೂ ಬಿಜೆಪಿಯಿಂದ ಬಂದಿದ್ದಾರೆ. ಅವರು ಮುಖ್ಯಮಂತ್ರಿ ಸ್ಥಾನದ ಸರದಿಯಲ್ಲಿ ಇಲ್ಲ. ವಿಜಯಪುರ ಜಿಲ್ಲೆಯಿಂದ ಯಾರಾದರೂ ಮುಖ್ಯಮಂತ್ರಿ ಯಾಗುವುದಾದರೆ ಅದು ನಾನೇ ಎಂದೂ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಹೇಳಲಾಗುತ್ತಿದೆ. ಹಿರಿಯ ಸಚಿವರಾದ ಜಿ. ಪರಮೇಶ್ವರ್ ಹಾಗೂ ಸತೀಶ್ ಜಾರಕಿಹೊಳಿ ಅವರ ಹೆಸರುಗಳೂ ಸಹ ಮುಖ್ಯಮಂತ್ರಿ ಸ್ಥಾನಕ್ಕೆ ಸುಳಿದಾಡುತ್ತಿವೆ.

ಹಿರಿಯ ನಾಯಕ ಆರ್.ವಿ. ದೇಶಪಾಂಡೆ ಅವರೂ ಸಹ ಇತ್ತೀಚೆಗೆ ಮುಖ್ಯಮಂತ್ರಿ ಸ್ಥಾನದ ಬಯಕೆ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಮಾತನಾಡಿರುವ ಬಿಜೆಪಿ ಹಿರಿಯ ನಾಯಕ ಹಾಗೂ ಸಂಸದ ಜಗದೀಶ್ ಶೆಟ್ಟರ್, ನಾವು ಸಿದ್ದರಾಮಯ್ಯ ಅವರ ಬೆನ್ನಿಗಿದ್ದೇವೆ ಎಂದು ಕಾಂಗ್ರೆಸ್ ನಾಯಕರು ಹೊರಗೆ ಹೇಳುತ್ತಿದ್ದಾರೆ. ಆದರೆ, ಈ ಸ್ಥಾನಕ್ಕಾಗಿ ಒಳಗೇ ಜಗಳ ನಡೆಯುತ್ತಿದೆ ಎಂದಿದ್ದಾರೆ.

ಆರ್.ವಿ. ದೇಶಪಾಂಡೆ, ಎಂ.ಬಿ. ಪಾಟೀಲ್, ಜಿ.ಪರಮೇಶ್ವರ, ಸತೀಶ್ ಜಾರಕಿಹೊಳಿ ಹೀಗೆ ಸರದಿ ದೊಡ್ಡದಿದೆ. ಡಿ.ಕೆ. ಶಿವಕುಮಾರ್ ಅವರು ಆಂತರಿಕವಾಗಿ ಈ ಸ್ಥಾನಕ್ಕಾಗಿ ಎಲ್ಲಾ ಪ್ರಯತ್ನ ನಡೆಸುತ್ತಿದ್ದಾರೆ. ಒಳ ಜಗಳದಿಂದ ಕಾಂಗ್ರೆಸ್ ಸರ್ಕಾರ ಸಮಸ್ಯೆ ಎದುರಿಸಲಿದೆ ಎಂದೂ ಅವರು ಹೇಳಿದ್ದಾರೆ.

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ – ಫೋ : 08192-272802, 276092.

### ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದನೆಂದರೆ ಮೆ॥ ಎನ್.ಎನ್. ಏಜೆನ್ಸೀಸ್, ಮಾಲೀಕರು, ಶ್ರೀಮತಿ ಜಿ.ಎಸ್. ಪುಷ್ಪಾ ಕೋಂ ಲೇಟ್ ಸಿದ್ದೇಶ್ ಜಿ.ಎಸ್., ನಂ.573, ಮಹದೇವ, 6ನೇ ಮುಖ್ಯರಸ್ತೆ, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ, ಇವರು ನಮ್ಮ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುತ್ತಾರೆ. ಸದರಿಯವರು ಬ್ಯಾಂಕಿಗೆ ಅಡಮಾನ ಮಾಡಿದ ಆಸ್ತಿಯು ನಿಯಮಾನುಸಾರ ಬ್ಯಾಂಕಿನ ಹೆಸರಿಗೆ ವರ್ಗಾವಣೆಗೊಂಡಿರುತ್ತದೆ. ಬಾಕಿ ವಸೂಲಿಗಾಗಿ ಈ ಕೆಳಕಂಡ ಸ್ಥಿರಾಸ್ತಿಯನ್ನು ಈ ಕೆಳಗೆ ವಿವರಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುತ್ತದೆ. ಆಸಕ್ತರು ಮಾರಾಟ ವಾಡಿಕೆಯಲ್ಲಿರುವ ಷರತ್ತುಗಳಿಗೆ ಒಳಪಟ್ಟು ಬಿಡ್ ಮೂಲಕ ಪಡೆಯಬಹುದು.

| ಸೊತ್ತಿನ ಮಾಲೀಕರು | ಹರಾಜಾಗುವ ಸ್ವತ್ತಿನ ವಿವರ | ಬಹಿರಂಗ ಹರಾಜಿನ ಸ್ಥಳ, ದಿನಾಂಕ ಮತ್ತು ಸಮಯ |
|---|---|---|
| ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ. | ದಾವಣಗೆರೆ ನಗರ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ.3581 ರ ಖಾಲಿ ನಿವೇಶನ ಇದರ ಅಳತೆ 140 X 80 ಅಡಿಗಳು. | ದಿನಾಂಕ : 09-10-2024ರ ಬುಧವಾರ. ಸಮಯ : ಬೆಳಗ್ಗೆ 12-00 ಘಂಟೆಗೆ. ಸೊತ್ತಿನ ಮುಂಭಾಗದಲ್ಲಿ. |

**ಬಹಿರಂಗ ಹರಾಜಿನ ಷರತ್ತುಗಳು :-** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ರೂ. 1,00,000/- ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಹೆಸರು ಮತ್ತು ವಿಳಾಸ ಭಾವಚಿತ್ರವಿರುವ ಗುರುತಿನ ಚೀಟಿ ಮತ್ತು ಪ್ಯಾನ್‌ಕಾರ್ಡ್‌ನೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಪ್ರಧಾನ ವ್ಯವಸ್ಥಾಪಕರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (7) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. 8) ಈ ಸ್ಥಿರ ಸೊತ್ತುಗಳ ಸ್ಟಾಂಪ್ ಡ್ಯೂಟಿ, ರಿಜಿಸ್ಟ್ರೇಷನ್ ಫೀ, ತೆರಿಗೆ (ಟಿ.ಡಿ.ಎಸ್), ಕಾನೂನು ಖರ್ಚು, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. 9) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (10) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು.

ದಿನಾಂಕ : 06-09-2024

ಸಹಿ/-
ಪ್ರಧಾನ ವ್ಯವಸ್ಥಾಪಕರು

## ಕೃಷಿ ಮಾರಾಟ ಇಲಾಖೆ
## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ.

ಪಿ.ಬಿ.ರಸ್ತೆ, ಎ.ಪಿ.ಎಂ.ಸಿ. ಪ್ರಾಂಗಣ, ದಾವಣಗೆರೆ-577003
ಇ-ಮೇಲ್: apmcdavanagere@rediffmail.com 08192-255044,

ಸಂಖ್ಯೆ:ಕೃಮಾಇ/ಕೃಉಮಾಸ(ದಾ)/1009/2024-25
ದಿನಾಂಕ:30-08-2024

### ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ-2ನೇ ಕರೆ

ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಸ್ವಚ್ಛತಾ ಏಜೆನ್ಸಿ ನೇಮಕಾತಿಗಾಗಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಇ-ಪೋರ್ಟಲ್‌ನ ಮೂಲಕ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: **18-09-2024** ರ ಸಂಜೆ 4.00 ಗಂಟೆಗೆ ಇ.ಎಂ.ಡಿ. ಹಾಗೂ ಪ್ರೊಸೆಸಿಂಗ್ ಫೀಯನ್ನು ಇ-ಪೇಮೆಂಟ್ ಮೂಲಕ ಇ-ಪ್ರೋಕ್ಯೂರ್‌ಮೆಂಟ್ ಇವರಿಗೆ ಪಾವತಿಸತಕ್ಕದ್ದು, ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ಸಮಯದಲ್ಲಿ [ರಜಾದಿನ ಹೊರತುಪಡಿಸಿ] ಅಥವಾ ವೆಬ್ ಸೈಟ್ https://kppp.karnataka.gov.in/ ನಲ್ಲಿ ಹಾಗೂ ದೂರವಾಣಿ ಸಂಖ್ಯೆ: 08192-255044 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ ಇಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ
ಕೃ.ಉ.ಮಾ. ಸಮಿತಿ,
ದಾವಣಗೆರೆ

ಸಹಿ/- ಆಡಳಿತಾಧಿಕಾರಿ
ಕೃ.ಉ.ಮಾ. ಸಮಿತಿ, ದಾವಣಗೆರೆ

ವಾಸಾಇ/ದಾವಣಗೆರೆ/319/ಕೆಎಸ್‌ಎಂಸಿಎ/2024-25

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ರಕ್ತ ದಾನ ಶ್ರೇಷ್ಠ ದಾನ


**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟು ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ ಬಿ ಬ್ಲಾಕ್, 2ನೇಯ ಮುಖ್ಯರಸ್ತೆ, ಕುಂದುವಾಡ ಕೆರೆ ಪೂರ್ವ ದಿಕ್ಕಿನ ಗೇಟ್ ಪಕ್ಕದಲ್ಲಿ 40+49+30 / 2 (1580 ಅಡಿ) ಲೇಕ್‌ವೀವ್ಯೂ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
98440 12530

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**2 BHK HOUSE FOR RENT**
Specious, as per Vastu Constructed Double Bed Rooms House In 1st Floor, Near Vidyanagara, 1st Bus stop Davangere. **(Veg Only)**
63615 93954

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಮನೆ ಲೀಸ್‌ಗೆ ಇದೆ**
ಹರಿಹರದಲ್ಲಿ ಹೊಸ 2 BHK ಇಂಡಿಪೆಂಡೆಂಟ್ ಫುಲ್ ಫರ್ನೀಶ್ಡ್ ಹೌಸ್, ಪೆಟ್ರೋಲ್ ಬಂಕ್ ಹಿಂದುಗಡೆ, ಪಿ.ಬಿ. ರೋಡ್.
88920 08800

**TUITIONS**
**ಗುರುದತ್ತ ಬಿ. ನಾಡಿಗೇರ್**
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
**ಗುರುದತ್ತ ಬಿ. ನಾಡಿಗೇರ್**
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಸೈಟು ಮಾರಾಟಕ್ಕಿದೆ**
ದಾವಣಗೆರೆ ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ ಒಂದಾದ ತುಂಗಭದ್ರಾ ಬಡಾವಣೆ (KHB) ಬಡಾವಣೆ ಸೈಟ್ ನಂಬರ್ 1882, ಅಳತೆ 9x12 ಮೀಟರ್ (LIG ಸೈಟ್) ಬನ್ನಿಕೋಡು ರಸ್ತೆ, ಪಕ್ಕದಲ್ಲಿ ಇದೆ. ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
98451 65062

**FLAT FOR LEASE**
3 BHK, Sqft :1888
**AM Apartment**
**Nainika Prime Rose**
Vidyanagar last city bus stop Davanagere.
89519 38228, 80502 22181

**ಮನೆ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ಹತ್ತಿರ 20x30 ಮನೆ, ಪಶ್ಚಿಮ ದಿಕ್ಕು
63629 67408
99454 32349

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : **ಆಮಂತ್ರಣ**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. 97400-01117

**WANTED**
Accountant (Female)
Qualification B.Com
1year Experience
Contact :
9916429793
Near DC office, Davangere

**ಮನೆ ಬಾಡಿಗೆಗೆ ಇದೆ**
ವಿವಿ ರೆಸಿಡೆನ್ಸ್, #1876/A, SS A ಬ್ಲಾಕ್, 2ನೇ ಕ್ರಾಸ್, ಪಾರ್ಕ್ ಎದುರು, 2 BHK ನೆಲಮಹಡಿ ಮನೆ, ಕಾರ್ ಪಾರ್ಕಿಂಗ್, ಬೋರ್‌ವೆಲ್ ವ್ಯವಸ್ಥೆ ಇದೆ.
94481 34340
9449615656, 94487 27266

**WANTED TECHARES**
B.Sc, B.Ed - 2 (maths)
B.Sc / B.Com - 2
Peon (ಆಯಾ) - 1
***SRP Convent***
Anjaneya Badavane,
17th Cross, Dvg - 04
95903 99449, 91136 31266, 77954 41369

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
**ಶ್ರೀ ಗುರು ಎಂಟರ್ ಪ್ರೈಸಸ್**
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ :
**ಮಣಿಕಂಠ ಏಜೆನ್ಸೀಸ್**, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಮತ್ತು ಪುರುಷರಿಗೆ ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1, 2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ. ವಯಸ್ಸಾದ ಜೆಂಟ್ಸ್ ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ. ಕೆಲಸಕ್ಕೆ ಬೇಕಾದರೆ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

**2BHK HOUSE FOR RENT**
Address : 48/2, 5th Cross, SS Layout, `A' Block, Shamanur Road, Davanagere - 577004.
84949 01002

**WANTED**
**CIVIL ENGINEER'S**
Freshers or with 2-3 years Experienced. Projects at Bangalore and Davangere.
80880 50729, 89711 03671

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಹರಪನಹಳ್ಳಿ ಹೊನ್ನಾಳಿ, ಚನ್ನಗಿರಿ, ಜಗಳೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ITI, Diploma ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ಬೇಕಾಗಿದ್ದಾರೆ. ಸಂಪರ್ಕಿಸಿ.
98805 31599

**ERA GROUP OF COMPANIES**
**CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies,
Qualification : SSLC to Degree,
Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**ROOM TO LET**
Well furnished with attached bath room for rent at Vidyanagara.
Contact :
63615 93954

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**SITE FOR SALE**
Davanagere SS Layout `A' Block East facing 60x40 Ft. MBA College Road, Beside Post-Office
94836 25525

**ಷೇರು ಮಾರುಕಟ್ಟೆ ಬಗ್ಗೆ ತರಬೇತಿ ನೀಡಲಾಗುವುದು**
ಷೇರು ಮಾರುಕಟ್ಟೆಯ ಬಗ್ಗೆ ವಿವರವಾಗಿ ತರಗತಿ/ ಕೋಚಿಂಗ್ ನೀಡುವುದರ ಮೂಲಕ ಕಡಿಮೆ ಅವಧಿಯಲ್ಲಿ ನಿಮಗೆ ಹೂಡಿಕೆ ಹಾಗೂ ಒಬ್ಬ ಒಳ್ಳೆಯ ಟ್ರೇಡರ್ ಆಗಲು ತರಬೇತಿ ನೀಡಲಾಗುವುದು.
99026 63560, 91088 05150

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
**ಶ್ರೀಧರ್ ಅಕ್ವೇರಿಯಂ**
ಎಂ.ಸಿ.ಸಿ. 'ಎ' ಬ್ಲಾಕ್, ಚರ್ಚ್ ರಸ್ತೆ, ದಾವಣಗೆರೆ.
63621 49155

**ಸ್ಕೈ ನೆಟ್ (SKY Net)**
ಹಬ್ಬಗಳ ಪ್ರಯುಕ್ತ ಭಾರೀ ರಿಯಾಯಿತಿ ಕಂಪ್ಯೂಟರ್ಸ್ ಪೂರ್ಣ ಸೆಟ್ ರೂ. 9999 ರಿಂದ ಪ್ರಾರಂಭ. ಕಂಪನಿ ವಾರಂಟಿ ಜೊತೆ ಹೆಚ್.ಪಿ. ಪ್ರಿಂಟರ್‌ಗೆ ಕೊಡುಗೆ. ಯಾವುದೇ HP ಪ್ರಿಂಟರ್ಸ್ ರೂ. 12000/- ಮೇಲ್ಪಟ್ಟು ಖರೀದಿಗೆ ರೂ. 9999ರವರೆಗೆ ಭಾರೀ ಕೊಡುಗೆ. ಲಿಮಿಟೆಡ್ ಪಿರಿಯಡ್ ಆಫರ್ಸ್
85535 39398

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ. ಸಂಪರ್ಕಿಸಿ :
99640 17729

**3 BHK House on Rent**
Vastu-based, East-facing House for Vegetarians' residence, Students, Mess, PG Center, Children School, Music-Dance School, Yoga School, Gym etc. Housing Board Colony, Beside Medical Hostel, Extended MCC 'B' Block.
***Students (Ladies) welcome.***
Mob. 6301558346

**KAIDB**
Furniture Factory for Rent, Davanagere. 4000 Sqft.
98459 77475

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮತ್ತು ಡೆಲಿವೆರಿ ಬಾಯ್ ಕೆಲಸ ಖಾಲಿ ಇದೆ. ಕರೆ ಮಾಡಿ :
74066 59695
79751 77934

**2 BHK HOUSE FOR RENT**
# 2581/5, 4th Main North, Church Road, MCC `A' Block, Davanagere.
94489 24513, 95356 59259

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. **(Only for Veg)**
Vidyanagar last city bus stop, Davangere
8951938228, 8050222181

**ಬೇಕಾಗಿದ್ದಾರೆ**
ಕಾರ್ ವಾಷ್, ವ್ಹೀಲ್ ಅಲೈನ್‌ಮೆಂಟ್ & ಬ್ಯಾಲೆನ್ಸಿಂಗ್ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ :
**ಕಾರ್ ಕೇರ್**, ದಾವಣಗೆರೆ.
95381 96395, 94486 39815

# ಹರಿಹರ ನಗರದ ವಿವಿಧೆಡೆಗಳಲ್ಲಿ ವಿಜೃಂಭಣೆಯ ವಿನಾಯಕ ಮಹೋತ್ಸವ


ನಡವಲಪೇಟೆ ಯುವಕ ಸಂಘದಿಂದ ಗಣೇಶೋತ್ಸವದ ಅಂಗವಾಗಿ ಬಾಲ್ಯ ಲಡ್ಡು ಗಣಪತಿ ಪ್ರತಿಷ್ಠಾಪನೆ


ನಗರದ ಮರಾಠಗಲ್ಲಿಯ ಮಿತ್ರವೃಂದ ಯುವಕ ಮಂಡಳಿ ವತಿಯಿಂದ 11 ಅಡಿ ಎತ್ತರದ ತೇಜೋರಾಮ್ ಗಣೇಶಮೂರ್ತಿ ಪ್ರತಿಷ್ಠಾಪನೆ


ನಗರದ ನಡವಲಪೇಟೆ ಬಸವೇಶ್ವರ ಯುವಕ ಸಂಘದ ವತಿಯಿಂದ ಗಣೇಶೋತ್ಸವ ಅಂಗವಾಗಿ ಗಣಪತಿ ಮೂರ್ತಿ ಪ್ರತಿಷ್ಠಾಪನೆ


ನಗರದ ಟ್ಯಾಕ್ಸಿ ಹಾಗೂ ಕಾರು ಮಾಲೀಕರು ಮತ್ತು ಚಾಲಕರ ಸಂಘದ ವತಿಯಿಂದ ವಿನಾಯಕ ಮಹೋತ್ಸವದ ಅಂಗವಾಗಿ ಗಣಪತಿ ಪ್ರತಿಷ್ಠಾಪನೆ, ಅದ್ದೂರಿ ಮೆರವಣಿಗೆ ಮೂಲಕ ಗಣೇಶ ಮೂರ್ತಿ ವಿಸರ್ಜನೆ.


ನಗರದ ನಾಮದೇವ ಸಿಂಪಿ ಸಮಾಜದ ವತಿಯಿಂದ ನಾಮದೇವ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಗಣೇಶೋತ್ಸವದ ಅಂಗವಾಗಿ ಗಣಪತಿ ಮೂರ್ತಿಯನ್ನು ಅದ್ದೂರಿ ಮೆರವಣಿಗೆಯೊಂದಿಗೆ ಪ್ರತಿಷ್ಠಾಪನೆ


ನಗರದ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಿಂದೂ ಜಾಗರಣ ವೇದಿಕೆ ಮತ್ತು ಹಿಂದೂ ಮಹಾ ಗಣಪತಿ ವತಿಯಿಂದ ಗಣೇಶೋತ್ಸವದ ಅಂಗವಾಗಿ ಗಣೇಶ ಮೂರ್ತಿ ಪ್ರತಿಷ್ಠಾಪನೆ


ನಗರದ ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮದೇವತೆ ಭರಂಪುರ ಯುವಕ ಸಂಘದ ವತಿಯಿಂದ ವಿನಾಯಕ ಮಹೋತ್ಸವದ ಅಂಗವಾಗಿ 18 ಅಡಿ ಎತ್ತರದ ಗಣೇಶ ಮೂರ್ತಿ ಪ್ರತಿಷ್ಠಾಪನೆ


ನಗರದ ಶಿಬಾರ ವೃತ್ತದ 70 ನೇ ವರ್ಷದ ಸಾರ್ವಜನಿಕ ವಿನಾಯಕ ಮಹೋತ್ಸವದ ಅಂಗವಾಗಿ ವಿನಾಯಕ ಮೂರ್ತಿಗೆ ವಿಶೇಷ ಪೂಜೆ, ಅಲಂಕಾರ ಮಹಾಮಂಗಳಾರತಿ


ನಗರದ ದೇವಸ್ಥಾನ ರಸ್ತೆಯ ಮನೆಯೊಂದರಲ್ಲಿ ಗಣೇಶೋತ್ಸವದ ಅಂಗವಾಗಿ ಗಣಪತಿಯು ಶಿವಲಿಂಗಕ್ಕೆ ನೀರಿನ ಅಭಿಷೇಕ ಮಾಡುವ ವಿಶೇಷ ಅಲಂಕಾರ.


ನಗರದ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಿಂದೂ ಜಾಗರಣ ವೇದಿಕೆ ಮತ್ತು ಹಿಂದೂ ಮಹಾ ಗಣಪತಿ ವತಿಯಿಂದ ಗಣೇಶೋತ್ಸವದ ಅಂಗವಾಗಿ ಗಣೇಶ ಮೂರ್ತಿ ಪ್ರತಿಷ್ಠಾಪನೆ


ನಗರದ ತರಕಾರಿ ವ್ಯಾಪಾರಸ್ಥರ ಸಂಘದ ವತಿಯಿಂದ, ವಿನಾಯಕ ಮಹೋತ್ಸವ ಅಂಗವಾಗಿ ತರಕಾರಿ ಮಾರುಕಟ್ಟೆ ಆವರಣದಲ್ಲಿ ಗಣೇಶ ಪ್ರತಿಷ್ಠಾಪನೆ


ನಗರದ ದೊಡ್ಡಿಬೀದಿಯ ಜೈ ಹನುಮಾನ್ ಗರಡಿ ಮನೆ ಯುವಕ ಸಂಘದ ವತಿಯಿಂದ 15 ಅಡಿ ಎತ್ತರದ ಶ್ರೀ ವಿನಾಯಕ ಮೂರ್ತಿ ಪ್ರತಿಷ್ಠಾಪನೆ

## ಹಿಂದೂ- ಮುಸ್ಲಿಂ-ಕ್ರಿಶ್ಚಿಯನ್ ಭಾವೈಕ್ಯತೆಯ ಗಣೇಶೋತ್ಸವ



ದಾವಣಗೆರೆ, ಸೆ. - ನಗರದ ಶಾಮನೂರು ಶಿವಶಂಕರಪ್ಪ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಹಿಂದೂ- ಕ್ರೈಸ್ತ- ಮುಸಲ್ಮಾನ್ ಎಲ್ಲಾ ಸಮಾಜದ ಜನಾಂಗದವರು ಸೇರಿ ಭಾವೈಕ್ಯತೆಯ ಗಣೇಶೋತ್ಸವವನ್ನು ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ನವರ ನೇತೃತ್ವದಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಪ್ರಭಾ ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನದಂತೆ ಗಣೇಶೋತ್ಸವ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ನಾಳೆ ಸೋಮವಾರ ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 4.30ಕ್ಕೆ ಮೆರವಣಿಗೆಯೊಂದಿಗೆ ಬಾತಿ ಕೆರೆಗೆ ವಿಸರ್ಜನೆ ಕಾರ್ಯಕ್ರಮ ಏರ್ಪಡಿಸಿಸಲಾಗಿದೆ.

ಗಣೇಶೋತ್ಸವ ಸಮಿತಿಯ ಪಕ್ಷದ ಮುಖಂಡರಾದ ಶುಭಮಂಗಳ, ಬಾತಿ ಶಿವಕುಮಾರ್, ಫುಟ್ಬಾಲ್ ಗಿರೀಶ್, ಸುರೇಶ್ ಜಾಧವ್, ಮೊಹಮ್ಮದ್ ಜಿಕ್ರಿಯಾ ಬುನಿಯನ್ ಭಾಸ್ಕರ್ ಗೋಪಾಲ್ (ಅಂತು) ಯುವರಾಜ್ ಶ್ರೀಕಾಂತ್ ಬಗರೆ ಹರೀಶ್ ಲಿಯಾಖತ್ ಅಲಿ, ಪ್ರವೀಣ್ ಎಚ್.ಕೆ.ಆರ್. ಸತೀಶ್ ಶೆಟ್ಟಿ, ಅಂಜಿನಪ್ಪ, ಮೊಹಮದ್ ಸಮಿವುಲ್ಲಾ, ಅಕ್ಬರ್, ಭಾಷಾ, ಫಯಾಜ್ ಅಹಮದ್, ಗೀತಾ ಚಂದ್ರಶೇಖರ್ ಪುಷ್ಪ ಶಾಮನೂರ್, ಜಯ, ಸುಮಿತ್ರ, ಲೋಕೇಶ್, ಸಲ್ಮಾ ಭಾನು ಮಂಗಳಮ್ಮ ಮಂಜುಳಮ್ಮ ಮುಬಾರಕ್ ಫೈರೋಜ್ ಇನ್ನು ಮುಂತಾದವರು ಇದ್ದರು.

## ನಗರದಲ್ಲಿ ನಾಳೆ ಕ್ಯಾನ್ಸರ್ ತಪಾಸಣೆ

ದಾವಣಗೆರೆ, ಸೆ.8- ನಗರದ ಬಾಡಾ ಕ್ರಾಸ್ ಬಳಿ ಇರುವ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಇದೇ ದಿನಾಂಕ 10 ರ ಮಂಗಳವಾರ ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆಯ ಡಾ. ಅಜಯ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಡಾ. ಅಮಿತ್, ಡಾ. ತೇಜಸ್, ವಿಘ್ನೇಶ್, ಮಂಜುನಾಥ ಉಪಸ್ಥಿತರಿದ್ದರು.

ಶಬರಿಗಿರಿ ರಿಯಲ್ ಎಸ್ಟೇಟ್
ಜಮೀನು ಮತ್ತು ಸೈಟ್ ಮಾರಾಟಕ್ಕಿದೆ

1) ಭರಮಸಾಗರ ಜಗಳೂರು ರೋಡ್ ಬಿದರಕೆರೆ ರೋಡಿಗೆ 6 ಎಕರೆ ಜಮೀನು ಮಾರಾಟಕ್ಕಿದೆ.
2) ವಿದ್ಯಾರ್ಥಿ ಭವನ್ ಸರ್ಕಲ್, ಹದಡಿ ಮೇನ್ ರೋಡ್ ಪೂರ್ವ-ಪಶ್ಚಿಮಕ್ಕೆ 12,000 sq ft ನಿವೇಶನ ಮಾರಾಟಕ್ಕಿದೆ.
3) ಶಿವಮೊಗ್ಗದಿಂದ 45 ಕಿ.ಮೀ ನಲ್ಲಿ 58 ಎಕರೆ ಹಾಗೂ 71 ಎಕರೆ ಒಂದೇ ಫ್ಲಾಟ್ ಮಾರಾಟಕ್ಕಿದೆ.

ಆಸಕ್ತರು ಸಂಪರ್ಕಿಸಿ : 89714 99575

SSLC / PUC ಫೇಲಾದವರು
Online ಪರೀಕ್ಷೆ ಮುಖಾಂತರ ಕೋರ್ಸ್ ಗೆ ಪ್ರವೇಶ ಪಡೆಯಬಹುದು
(ಕೇಂದ್ರ / ರಾಜ್ಯ ಸರ್ಕಾರ / PU Board ಮಾನ್ಯತೆ ಇದೆ)
✓ಬಡ್ತಿಗೆ ಅನುಕೂಲವಾಗಲಿದೆ. ✓ಇದರಲ್ಲಿ ಪಾಸಾದವರು ರೆಗ್ಯುಲರ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದು.
✓IInd PUC Science ಪಾಸ್ ಮಾಡಿದರೆ BSc ನರ್ಸಿಂಗ್, ಮೆಡಿಕಲ್ ನೀಟ್, ಇಂಜಿನಿಯರಿಂಗ್ ಹಾಗೂ ಇತರೆ ಪದವಿಗಳನ್ನು ಪಡೆಯಬಹುದು.
ಸಂಪರ್ಕಿಸಿ
ಶ್ರೇಯಸ್ ಕರೆಸ್ಪಾಂಡೆನ್ಸ್ ಕಾಲೇಜು
DCM Township Davangere
Mob: 9731740824 • 8310747112

## ಟಾಪ್ 5 ಸೂಪರ್ ಸ್ಟಾರ್ ಎಜುಕೇಟ್ ಗೌರವಕ್ಕೆ ಪಾತ್ರರಾದ ವಿನಯ್ ಕುಮಾರ್



ದಾವಣಗೆರೆ, ಸೆ.8- ದೇಶದ ಪ್ರಖ್ಯಾತ ಪತ್ರಿಕೆ ದಿ ಎಕಾನಮಿಕ್ಸ್ ಟೈಮ್ಸ್ ಭಾರತ ದೇಶಾದ್ಯಂತ ನಡೆಸಿದ ಸರ್ವೆಯಲ್ಲಿ ಟಾಪ್ 5 ಸೂಪರ್ ಸ್ಟಾರ್ ಎಜುಕೇಟ್ ಎಂಬ ಕೀರ್ತಿಗೆ ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಪಾತ್ರರಾಗಿದ್ದಾರೆ. ಈ ಮೂಲಕ ದೇಶಾದ್ಯಂತ ಜನಪ್ರಿಯ ವ್ಯಕ್ತಿ ಎಂಬ ಗೌರವಕ್ಕೂ ಪಾತ್ರರಾಗಿದ್ದಾರೆ.

ಶಿಕ್ಷಕರ ದಿನಾಚರಣೆ ದಿನದಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದು, ಯುಪಿಎಸ್‌ಸಿ ಫಲಿತಾಂಶ, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ, ಯಶಸ್ಸು, ಶೂನ್ಯದಿಂದ ಸಂಸ್ಥೆ ಆರಂಭಿಸಿ ದೇಶಾದ್ಯಂತ ಗಳಿಸಿರುವ ಜನಪ್ರಿಯತೆ, ಕೌಶಲ್ಯ, ಪರಿಶ್ರಮ ಸೇರಿದಂತೆ ಹಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಗೌರವ ನೀಡಲಾಗಿದೆ.

ಬಿಲಿಯನೇರ್‌ಗಳು ಹೂಡಿಕೆ ಮಾಡಿದ ಸಂಸ್ಥೆಗಳನ್ನು ಹೊಂದಿರುವವರ ಜೊತೆಗೆ ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಿಸಿ, ಕಡಿಮೆ ಅವಧಿಯಲ್ಲಿ ರಾಜಕಾರಣದಲ್ಲಿ ಗಳಿಸಿದ ಜನಪ್ರಿಯತೆ, ಜನಬೆಂಬಲ, ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯೂ ವಿನಯ್ ಕುಮಾರ್ ಅವರ ಸಾಧನೆಯಲ್ಲಿ ಗಮನಾರ್ಹ ಅಂಶ.

ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳದ ವಿನಯ್ ಕುಮಾರ್ ಅವರು ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಘಟಾನುಘಟಿಗಳ ನಡುವೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು ಅತ್ಯಂತ ಕಡಿಮೆ ಅವಧಿಯಲ್ಲಿ ಜನ ಮನ್ನಣೆ ಗಳಿಸಿದ್ದು, 43 ಸಾವಿರಕ್ಕೂ ಹೆಚ್ಚು ಮತ ಪಡೆದಿದ್ದರು. ಇಡೀ ಕರ್ನಾಟಕದ ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದ ಪಕ್ಷೇತರ ಅಭ್ಯರ್ಥಿಯೊಬ್ಬರು ಗಳಿಸಿದ ಹೆಚ್ಚಿನ ಮತಗಳು ಆಗಿದ್ದವು ಎಂಬ ಅಂಶವನ್ನು ಈ ಗೌರವ ನೀಡಲು ಪರಿಗಣಿಸಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರೂ ಸೇರಿದಂತೆ ಎಲ್ಲಾ ವರ್ಗದ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಮುಂದೆ ಬರಬೇಕು. ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಬೇಕು. ಐಎಎಸ್, ಐಪಿಎಸ್, ಕೆಎಎಸ್ ಕನಸು ನನಸು ಮಾಡಿಕೊಳ್ಳಬೇಕು ಎಂಬ ಬಯಕೆ ಹೊಂದಿರುತ್ತಾರೆ. ಇದಕ್ಕೆ ಇನ್‌ಸೈಟ್ಸ್ ಸಂಸ್ಥೆ ವೇದಿಕೆ ಕಲ್ಪಿಸಲಿದೆ. ಸಂಸ್ಥೆಯ ಬೋಧಕ, ಬೋಧಕೇತರ ಸಿಬ್ಬಂದಿ, ಜಿಲ್ಲೆಯ ಜನತೆ ತೋರಿದ ಪ್ರೀತಿಯಿಂದಾಗಿ ಇದು ಸಾಧ್ಯವಾಗಿದೆ ಎಂದು ವಿನಯ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಎನ್.ಟಿ.ಪಿ. ಶ್ರೀನಿತ್ಯ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್
ಪ್ರಧಾನ ಕಛೇರಿ : 2673/ಎ, ಎಸ್.ಐ. ಆರ್ಕೇಡ್, ಮೊದಲನೇ ಮಹಡಿ
ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ-577 004.
ದೂರವಾಣಿ : 08192-220588, ಮೊ. : 96638 13674

11ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ಸಹಕಾರಿಯ
2023-24ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು
ದಿನಾಂಕ : 21.09.2024ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ
ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ ಇಲ್ಲಿ
ಸಹಕಾರಿಯ ಅಧ್ಯಕ್ಷರಾದ ಶ್ರೀ ಇಂದ್ರಪ್ಪ ಹೆಚ್. ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ದಿನಾಂಕ : 30.08.2024
ದಾವಣಗೆರೆ.

ಆಡಳಿತ ಮಂಡಳಿಯ ಪರವಾಗಿ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ವಿದೇಶ ಪ್ರವಾಸ ಶುಭ ಹಾರೈಕೆ



ರಾಯಚೂರು ಜಿಲ್ಲೆ ಅಬಕಾರಿ ಇಲಾಖೆಯ
ಉಪ ಆಯುಕ್ತರಾದ
ಶ್ರೀಯುತ ಡಿ.ಎನ್. ತಿಪ್ಪೇಸ್ವಾಮಿ
ಅವರು ಯುರೋಪ್ ದೇಶಕ್ಕೆ ಪ್ರವಾಸ ಕೈಗೊಂಡಿದ್ದು, ಇವರ ವಿದೇಶ ಪ್ರವಾಸ ಸುಖಕರವಾಗಿಲೆಂದು ಶುಭ ಹಾರೈಸುತ್ತೇವೆ.

• ಗೋಪಿ ಆರ್., • ಶ್ರೀಮತಿ ಆಶಾ
• ಚಿನ್ಮಯಿ ಜಿ., • ಗೋಕುಲ್ ಜಿ.,
ಗುರುಸಿದ್ದಯ್ಯ ಹಿರೇಮಠ ಹಾಗೂ ಸ್ನೇಹಿತರು, ಜಗಳೂರು

# ಕನಗೊಂಡನಹಳ್ಳಿ ಗ್ರಾಮದೇವತೆ ದೇವಸ್ಥಾನದ ಬಳಿ ಬೇವಿನ ಮರದಲ್ಲಿ ಹಾಲು



ದಾವಣಗೆರೆ, ಸೆ.8- ತಾಲ್ಲೂಕಿನ ಕನಗೊಂಡನಹಳ್ಳಿ ಗ್ರಾಮದಲ್ಲಿನ ಗ್ರಾಮ ದೇವತೆ ಶ್ರೀ ಮರಡಿ ಕೆಂಚಮ್ಮ ದೇವಸ್ಥಾನದ ಬಳಿಯ ಬೇವಿನ ಮರದಲ್ಲಿ ಹಾಲು ಬರುತ್ತಿರುವುದನ್ನು ಕಂಡು ಗ್ರಾಮಸ್ಥರು ಚಕಿತಗೊಂಡಿದ್ದಾರೆ.

ಶುಕ್ರವಾರದಿಂದ ಒಂದೇ ಸಮನೇ ಮರದಲ್ಲಿ ಹಾಲು ಬರುತ್ತಿದ್ದುದನ್ನು ಜನತೆ ಗಮನಿಸಿ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಬೇವಿನ ಮರಕ್ಕೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಯುವಕರು ಸಾಮಾಜಿಕ ಜಾಲ ತಾಣಗಳ ಮೂಲಕ ನಡೆದ ಘಟನೆ ಬಗ್ಗೆ ಹಂಚಿಕೊಳ್ಳುತ್ತಿದ್ದಾರೆ.

ಸುಮಾರು ವರ್ಷಗಳ ಹಳೆಯ ಈ ಮರದಲ್ಲಿ ಏಕಾ ಏಕಿ ಈ ರೀತಿ ಹಾಲು ಬರುತ್ತಿರುವುದರಿಂದ ಗ್ರಾಮಕ್ಕೆ ಒಳಿತಾಗುತ್ತದೋ ಕೆಡುಕಾಗುತ್ತದೋ ಎಂಬ ಆತಂಕವೂ ಗ್ರಾಮಸ್ಥರಲ್ಲಿತ್ತು.

**ವಿಜ್ಞಾನಿಗಳು ಹೇಳೋದು ಹೀಗೆ :** ಎಲ್ಲ ಮರಗಳಲ್ಲಿನ ಬೇರುಗಳು ನೀರನ್ನು ಕೆಳಗಿನಿಂದ ಮೇಲಕ್ಕೆ ತೆಗೆದುಕೊಂಡು ಹೋಗಲು ಸಹಾಯ ಮಾಡುತ್ತವೆ. ಇದರಲ್ಲಿ ಇರುವ ಕೋಶಗಳು ಮರದ ಎಲ್ಲ ರಂಬೆ ಕೊಂಬೆಗಳಿಗೆ ನೀರನ್ನು ರವಾನಿಸುತ್ತವೆ. ಹೀಗೆ ನೀರು ಪೂರೈಸುವ ಕೋಶಗಳು ಅಪರೂಪಕ್ಕೆ ನಾಶವಾದಾಗ ಅಥವಾ ಕೋಶಗಳು ತನ್ನ ಕ್ರಿಯೆಯನ್ನು ಕಡಿಮೆ ಮಾಡಿದಾಗ ಮರದ ಒಳಗಿರುವ ನೀರಿನ ಅಂಶ ಹೊರಗೆ ಬರುತ್ತದೆ. ಸಹಜವಾಗಿ ಮರದಲ್ಲಿ ಬುರುಗು ಇರುವುದರಿಂದ, ಬುರುಗು ಮಿಶ್ರಿತ ನೀರು ಹಾಲಾಗಿ ಕಾಣುತ್ತದೆ ಎನ್ನುತ್ತಾರೆ ವಿಜ್ಞಾನಿಗಳು.


# ಹಣ ಪೊಲೀಸರಿಗೆ ಒಪ್ಪಿಸಿದ ಸನ್ನಡತೆಯ ನಾಗರಿಕನ ಮೇಲೆ ದರೋಡೆ ಪ್ರಕರಣ!

ರಾಯ್ ಬರೇಲಿ, ಸೆ. 8 - ತನಗೆ ದೊರೆತಿದ್ದ ಹಣದ ಚೀಲವೊಂದನ್ನು ಪೊಲೀಸರಿಗೆ ತಲುಪಿಸಿದ ಸನ್ನಡತೆಯ ನಾಗರಿಕನ ಮೇಲೆ ದರೋಡೆಯ ಆರೋಪ ಹೊರಿಸಿ ಜೈಲಿಗೆ ಕಳಿಸಿದ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಉತ್ತರ ಪ್ರದೇಶದ ಜಮುನಿಪುರ ಚರುಹಾರ್ ಎಂಬಲ್ಲಿನ ಗೌರವ್ ಎಂಬ ವ್ಯಕ್ತಿಯನ್ನು ಆಗಸ್ಟ್ 26ರಂದು ಬಂಧಿಸಲಾಗಿತ್ತು. ಈ ಬಂಧನವನ್ನು ಸ್ಥಳೀಯರು ವಿರೋಧಿಸಿ ಪ್ರತಿಭಟನೆ ನಡೆಸಿದ್ದರು.

ಆಗಸ್ಟ್ 20ರಂದು ಗೌರವ್ ಅವರಿಗೆ ಹಣದ ಚೀಲ ಒಂದು ದೊರೆತಿತ್ತು. ನಂತರ ಅವರು ಗ್ರಾಮದ ಮುಖ್ಯಸ್ಥರ ಜೊತೆ ಸ್ಥಳೀಯ ಪೊಲೀಸ್ ಠಾಣೆಗೆ ತೆರಳಿ ಹಣ ಸಿಕ್ಕಿದ ಬಗ್ಗೆ ತಿಳಿಸಿದರು ಹಾಗೂ ಹಣವನ್ನು ಪೊಲೀಸರಿಗೆ ನೀಡಿದ್ದರು. ಆದರೆ ಪೊಲೀಸರು ಅವರ ವಿರುದ್ಧವೇ ದರೋಡೆ ಪ್ರಕರಣ ದಾಖಲಿಸಿದ್ದರು ಹಾಗೂ ಆಗಸ್ಟ್ 26ರಂದು ಬಂಧಿಸಿದ್ದರು. ಗ್ರಾಮಸ್ಥರು ಹಾಗೂ ಸ್ಥಳೀಯ ವರ್ತಕರು ಪ್ರತಿಭಟನೆ ನಡೆಸಿ ಗೌರವ್ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಗೌರವ್ ನಿರಪರಾಧಿಯಾಗಿದ್ದು ಪೊಲೀಸರು ಈ ಪ್ರಕರಣವನ್ನು ಸರಿಯಾಗಿ ನಿಭಾಯಿಸಿಲ್ಲ ಎಂದು ಆಕ್ಷೇಪಿಸಿದರು. ಸಾರ್ವಜನಿಕ ಆಕ್ರೋಶದ ಹಿನ್ನೆಲೆಯಲ್ಲಿ ಪೊಲೀಸರು ತನಿಖೆ ನಡೆಸಿದರು. ದರೋಡೆಯಲ್ಲಿ ಗೌರವ್ ಭಾಗಿಯಾಗಿಲ್ಲ ಎಂದು ತಿಳಿದುಬಂತು. ಸಾಕ್ಷಿಗಳ ಕೊರತೆ ಹಿನ್ನೆಲೆಯಲ್ಲಿ ಗೌರವ್ ಬಿಡುಗಡೆ ಮಾಡಲಾಗಿದೆ ಎಂದು ಎ.ಎಸ್.ಪಿ. ಸಂಜೀವ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

# ಹೊನ್ನಾಳಿ : ಶಿವ ಸೊಸೈಟಿ ಅಧ್ಯಕ್ಷರಾಗಿ ಶಿವಕುಮಾರ್



ಹೊನ್ನಾಳಿ, ಸೆ. 8 - ಶಿವ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಕಮ್ಮಾರಗಟ್ಟೆಯ ಕೆ.ಎಸ್. ಶಿವಕುಮಾರ್, ಉಪಾಧ್ಯಕ್ಷರಾಗಿ ಕೂಲಂಬಿ ಬಸವರಾಜ್ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ಯಾಗಿದ್ದ ಸಹಕಾರ ಅಭಿವೃದ್ಧಿ ಅಧಿಕಾರಿ ನವೀನ್‌ಕುಮಾರ್ ತಿಳಿಸಿದರು. ಮಾಜಿ ಅಧ್ಯಕ್ಷ ಎಂ.ಸತೀಶ್, ಪಿ.ಬಿ. ಶೈಲೇಶ್, ಪಿ. ಚಂದ್ರಪ್ಪ, ನಿರ್ದೇಶಕ ಕೆ.ಜಿ. ಮಂಜುಳಾ, ಆರ್.ಸಿ. ಶಂಕರಗೌಡ, ಡಿ.ಜಿ.ಎನ್. ಚನ್ನವೀರಪ್ಪ, ಕೆ.ಜಿ. ಕರಿಬಸಪ್ಪ, ಬಿ. ಕೆಂಚಪ್ಪ, ಜಿ. ಯಶೋಧಮ್ಮ ಎನ್. ಕೃಷ್ಣನಾಯ್ಕ, ಸಂಘದ ಕಾರ್ಯದರ್ಶಿ ಎಚ್.ಎನ್. ರುದ್ರೇಶ್ ಇನ್ನಿತರರಿದ್ದರು.

# ಹಿರಿಯರ ಮಾರ್ಗದರ್ಶನದಿಂದ ಸದೃಢ ದೇಶ

## ಹಿರಿಯ ನಾಗರಿಕರ ಕ್ರೀಡಾಕೂಟ ಉದ್ಘಾಟಿಸಿದ ನ್ಯಾ.ಮಹಾವೀರ ಮ. ಕರೆಣ್ಣನವರ್



ದಾವಣಗೆರೆ, ಸೆ.8- ಯುವಕರು, ಹಿರಿಯರನ್ನು ಕಡೆಗಣಿಸದೇ ಅವರ ಮಾರ್ಗದರ್ಶನ ಪಡೆದು ಸದೃಢ ದೇಶ ಹಾಗೂ ಸಮಾಜ ನಿರ್ಮಿಸಲು ಮುಂದಾಗಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮ. ಕರೆಣ್ಣನವರ್ ತಿಳಿಸಿದರು.

ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ನಗರದ ಎಂಸಿಸಿ 'ಬಿ' ಬ್ಲಾಕ್‌ನ ಬಾಪೂಜಿ ಶಾಲೆಯ ಮೈದಾನದಲ್ಲಿ ಹಿರಿಯ ನಾಗರಿಕರಿಗಾಗಿ ಆಯೋಜಿಸಿದ್ದ 'ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆ'ಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಮನೆಯ ಹಿರಿಯರು ಸೇರಿದಂತೆ ಸಮಾಜದಲ್ಲಿನ ಎಲ್ಲ ಹಿರಿಯ ನಾಗರಿಕರನ್ನು ಗೌರವದಿಂದ ಕಾಣಬೇಕು ಮತ್ತು ಅವರ ಬಗ್ಗೆ ಅವಹೇಳನಕಾರಿ, ನಿಷ್ಕಾಳಜಿ ಹಾಗೂ ನಿರ್ಲಕ್ಷ್ಯ ಭಾವದಿಂದ ಕಾಣಬಾರದು ಎಂದು ಹೇಳಿದರು.

ವೃದ್ಧರ ಅನುಕೂಲ ಹಾಗೂ ಸುರಕ್ಷತೆಗಾಗಿ ಹಿರಿಯ ನಾಗರಿಕರ ಸಹಾಯ ಯೋಜನೆ ಮತ್ತು ರಕ್ಷಣಾ ಕಾಯ್ದೆಯಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ನ್ಯಾಯಾಲಯ ವ್ಯವಸ್ಥೆಯೂ ಇದೆ ಎಂದು ತಿಳಿಸಿದರು. ಸರ್ಕಾರವು ಹಿರಿಯ ನಾಗರಿಕರ ಹಿತ ಕಾಪಾಡುವ ದೃಷ್ಟಿಯಿಂದ ವೃದ್ಧಾಪ್ಯ ವೇತನ ಸೇರಿದಂತೆ ಅನೇಕ ಯೋಜನೆಗಳನ್ನು ರೂಪಿಸಿದೆ ಎಂದು ಹೇಳಿದರು.

ಮಾನಸಿಕ ಹಾಗೂ ಬೌದ್ಧಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹಿರಿಯ ನಾಗರಿಕರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ರವಿ ನಾರಾಯಣ ಮಾತನಾಡಿ, ಸಮಾಜ ಸೇವೆಗೈದ ಅನೇಕ ಹಿರಿಯ ನಾಗರಿಕರಿಗೆ ಸಿಗುವ ಅಲ್ಪ ಸಂಭಾವನೆಯಲ್ಲಿ ಈ ದಿನಮಾನಗಳಲ್ಲಿ ಜೀವನ ನಡೆಸುವುದು ಕಷ್ಟಕರವಾಗಿದೆ. ಆದ್ದರಿಂದ ಸರ್ಕಾರವು ಈ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿದರು. ರೈಲ್ವೆ ಇಲಾಖೆಯಲ್ಲಿ ಈ ಮೊದಲು ಹಿರಿಯ ನಾಗರಿಕರಿಗಾಗಿ ಶೇ.30 ಸೌಲಭ್ಯಗಳಿದ್ದವು. ಕೊರೊನಾ ನೆಪದಲ್ಲಿ ಇದನ್ನು ಕಡಿತಗೊಳಿಸಿದ್ದಾರೆ ಎಂದು ದೂರಿದರು.

ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಹಿರಿಯರನ್ನು ಗೌರವದಿಂದ ಕಾಣುವುದು ಎಲ್ಲರ ಕರ್ತವ್ಯ ಎಂದು ಹೇಳಿದರು. ಸಮಾಜದಲ್ಲಿನ ಎಲ್ಲ ಹಿರಿಯ ನಾಗರಿಕರು ಭ್ರಷ್ಟಾಚಾರ, ಶೋಷಣೆ ಹಾಗೂ ಅನ್ಯಾಯದ ವಿರುದ್ಧ ಧ್ವನಿ ಎತ್ತಿ ನಿಲ್ಲಬೇಕು ಎಂದು ಹೇಳಿದರು.

ಈ ವೇಳೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಡಾ.ಕೆ.ಕೆ ಪ್ರಕಾಶ್, ಹಿರಿಯ ನಾಗರಿಕರ ಸಂಘದ ಗೌರವ ಕಾರ್ಯದರ್ಶಿ ಎಸ್ ಗುರುಮೂರ್ತಿ, ಎನ್ ಮಹೇಶ್ವರಪ್ಪ ಮತ್ತಿತರರಿದ್ದರು.

## ನಿರ್ಮಲ ನರೇಂದ್ರ ವಾಲಾವಲ್ಕರ್ ನಿಧನ



ದಾವಣಗೆರೆ ಎಸ್.ಎಸ್ ಬಡಾವಣೆ, ಅಥಣಿ ಕಾಲೇಜು ರಸ್ತೆ, ನರೇಂದ್ರ ಡೆಂಟಲ್ ಕ್ಲಿನಿಕ್, ವಾಸಿ **ನಿರ್ಮಲ ನರೇಂದ್ರ ವಾಲಾವಲ್ಕರ್** ಇವರು ದಿನಾಂಕ 8.9.2024ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು, ಸೊಸೆ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.9.2024ರ ಸೋಮವಾರ ಬೆಳಿಗ್ಗೆ 9 ಗಂಟೆಗೆ ಪಿ.ಬಿ. ರಸ್ತೆ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು :** ಶ್ರೀ ಡಾ. ನಾರಾಯಣ ವಾಲಾವಲ್ಕರ್
ಶ್ರೀಮತಿ ಪ್ರತಿಭಾ ನಾರಾಯಣ ವಾಲಾವಲ್ಕರ್
ಶುಭಾಂಗ್ , ಈಶ್ವರಿ, ವರುಣ್ ಸಾಮಂತ್, ವೈಷ್ಣವಿ ಸಾಮಂತ್
ಮೊ : 94804 79242


SSIMS SPARSH CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಕೀಲು ಮರುಜೋಡಣೆ
- ಮೊಣಕಾಲು ನೋವು
- ಹಿಪ್ ಮರುಜೋಡಣೆ
- ಭುಜದ ನೋವು
- ರಿವಿಷನ್ ಶಸ್ತ್ರಚಿಕಿತ್ಸೆ
- ಸ್ಪೋರ್ಟ್ಸ್ ಇಂಜುರೀಸ್
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಮಂಗಳವಾರ, 10ನೇ ಸೆಪ್ಟೆಂಬರ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ


ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



॥ ಶ್ರೀ ಶಿವನಾರದ ಮುನಿ ಪ್ರಸನ್ನ ॥



## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು,
ಬನಶಂಕರಿ ಬಡಾವಣೆ ವಾಸಿಗಳಾದ
ಶ್ರೀಮತಿ ವಾಣಿ ಕೆ. ಶ್ರೀ ಮಹದೇವಪ್ಪ ಕೆ. ಬಿ.,
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 02.09.2024ನೇ ಸೋಮವಾರ ಬೆಳಿಗ್ಗೆ 9.45ಕ್ಕೆ
ನಮ್ಮ ಪೂಜ್ಯ ತಾಯಿಯವರಾದ ಕಾಯಕ ಯೋಗಿ
**ಶ್ರೀಮತಿ ಕೆಂಚಾಪುರದ ರತ್ನಮ್ಮನವರು**
76 ವರ್ಷ ಇವರು
(ಲಿಂ॥ ಕೆಂಚಾಪುರದ ಬಸವನಗೌಡ ಇವರ ಧರ್ಮಪತ್ನಿ)
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 10.09.2024ರ ಮಂಗಳವಾರ ಬೆಳಿಗ್ಗೆ
11.15ಕ್ಕೆ "ಮೃತರ ಸ್ವಗೃಹ ದಿದ್ದಿಗೆ ಗ್ರಾಮದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ
ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು :**

ಶ್ರೀಮತಿ ರುದ್ರಮ್ಮ ಶ್ರೀ ಕೆ. ನಾರಪ್ಪ, ನಿವೃತ್ತ ಪದವೀಧರ ಮುಖ್ಯೋಪಾಧ್ಯಾಯರು, ಮತ್ತು ಮಕ್ಕಳು, ಮೊಮ್ಮಕ್ಕಳು ದಾವಣಗೆರೆ.
ಶ್ರೀಮತಿ ಯಲವಟ್ಟಿ ಶಾರದಮ್ಮ ಲಿಂ॥ ವೈ. ವಾಮದೇವಪ್ಪ ಮತ್ತು ಸಹೋದರರು,
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಶಾಬನೂರು.
ಶ್ರೀಮತಿ ಶೈಲಾ ಡಿ.ಸಿ., ಪ್ರೌಢಶಾಲಾ ಶಿಕ್ಷಕಿ, ಕೆ.ಎನ್. ಶಿವಪ್ರಕಾಶ್‌ಗೌಡ, ಉಪನ್ಯಾಸಕರು, ಮಗಳು : ಲಿಖಿತ ಕೆ.ಎಸ್., ದಾವಣಗೆರೆ.
ಶ್ರೀಮತಿ ವಾಣಿ ಕೆ., ಶ್ರೀ ಮಹದೇವಪ್ಪ ಕೆ.ಬಿ. , ಮಗಳು : ಲಕ್ಷ್ಮೀ ಕೆ.ಎಂ. ಬನಶಂಕರಿ ಬಡಾವಣೆ, ದಾವಣಗೆರೆ
ಶ್ರೀಮತಿ ವಿಶಾಲ, ಶ್ರೀ ಡಿ.ಡಿ. ಶಿಖರಪ್ಪ, ಪ್ರಗತಿಪರ ಕೃಷಿಕರು, ಮಗ : ನೂತನ್ ಡಿ.ಎಸ್. ದಿದ್ದಿಗೆ.
ಶ್ರೀಮತಿ ಮಮತ ವೈ., ಶ್ರೀ ಉಮೇಶ್ ವೈ.ವಿ. ಮತ್ತು ಮಕ್ಕಳು, ಶಾಬನೂರು.
ಶ್ರೀಮತಿ ಬಿ. ಮುಕ್ತ, ಶಿಕ್ಷಕಿ, ಶ್ರೀ ಕೆ.ಎನ್. ನಿರಂಜನಮೂರ್ತಿ, ಶಿಕ್ಷಕರು, ಮಗಳು : ಕೆ.ಎನ್. ಪೂಜಾ, ಕೊಟ್ಟೂರು.

**ನಮ್ಮ ಸಂಸ್ಥೆಗಳು :**

ಶ್ರೀ ಶಿವನಾರದ ಮುನಿ ಸಾವಯವ ಕೃಷಿ ಮಾಹಿತಿ ಮತ್ತು ಡಾ. ಸಾಯಿಲ್ ಜೈವಿಕ ಗೊಬ್ಬರ ಮಾರಾಟ ಕೇಂದ್ರ,
ವಿದ್ಯಾರ್ಥಿ ಭವನ ಸರ್ಕಲ್, ದಾವಣಗೆರೆ. ಫೋ. : 99726 99813
ಕೃಷಿಲಕ್ಷ್ಮಿ ಸಾವಯವ ಕೃಷಿ ಮಾಹಿತಿ ಮತ್ತು ಡಾ. ಸಾಯಿಲ್ ಜೈವಿಕ ಗೊಬ್ಬರ ಮಾರಾಟ ಕೇಂದ್ರ,
ಪಿಎಲ್‌ಡಿ ಬ್ಯಾಂಕ್ ಎದುರು, ಜಗಳೂರು. ಫೋ. : 9449145867
ಮಹದೇವಪ್ಪ ದಿದ್ದಿಗೆ, ಮೈಕ್ರೋಬಿ ಫೌಂಡೇಶನ್ ಜಿಲ್ಲಾ ಸಂಚಾಲಕರು ಹಾಗೂ ಸಾವಯವ ಕೃಷಿ ಸಲಹೆಗಾರರು
ಮೈಕ್ರೋಬಿ ಆಗ್ರೋಟೆಕ್ ಪ್ರೈವೇಟ್ ಲಿಮಿಟೆಡ್, ಯಲಹಂಕ, ಬೆಂಗಳೂರು
ನಮ್ಮ ಎರಡು ಸಂಸ್ಥೆಯ ಸಂಚಾಲಕರು, ದಾವಣಗೆರೆ ಜಿಲ್ಲೆ, ಮೈಕ್ರೋಬಿ ಆಗ್ರೋಟೆಕ್ ಪ್ರೈ. ಲಿ.ನ ಸಂಪನ್ಮೂಲ ವ್ಯಕ್ತಿಗಳು.
ಕೆಂಚಾಪುರದ ವಂಶಸ್ಥರು, ದಿದ್ದಿಗೆ, ಗುಡ್ಡನಾಯಕನಹಳ್ಳಿ ವಂಶಸ್ಥರು, ದಿದ್ದಿಗೆ, ಯಲವಟ್ಟಿ ವಂಶಸ್ಥರು, ಶಾಬನೂರು
ಹಾಗೂ ಬಂಧು-ಮಿತ್ರರು ಹಾಗೂ ದಿದ್ದಿಗೆ ಗ್ರಾಮಸ್ಥರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.







KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas